## ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಬೆಂಗಳೂರು

ಸಂಖ್ಯೆ:ಆಆಶಾಖೆ/2011-12 ದಿ: 22-11-2011

### ಸಭಾ ನಡಾವಳಿಗಳು

ಶ್ರೀ ತುಷಾರ್ ಗಿರಿ ನಾಥ್, ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ದಿ: 22-11-2011ರಂದು ಬೆಳಿಗ್ಗೆ 10-00ಗಂಟೆಗೆ ವೆಂಕಟರಾವ್ ಸಭಾಂಗಣ, ಧಾರವಾಡ ಇಲ್ಲಿ ನಡೆದ ಬೆಳಗಾವಿ ಹಾಗೂ ಗುಲ್ಬರ್ಗಾ ವಿಭಾಗಗಳ ಶೈಕ್ಷಣಿಕ, ಆರ್ಥಿಕ ಹಾಗೂ ಯೋಜನಾ ಚಟುವಟಿಕೆಗಳ ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳು.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:**

1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗ
4. ನಿರ್ದೇಶಕರು, ಆಯುಕ್ತರ ಕಛೇರಿ, ಸಾ.ಶಿ.ಇ. ಧಾರವಾಡ
5. ನಿರ್ದೇಶಕರು, ಎಸ್.ಎಸ್.ಎ. ಬೆಂಗಳೂರು
6. ನಿರ್ದೇಶಕರು (ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ, ಸಾ.ಶಿ.ಇ. ಬೆಂಗಳೂರು
7. ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಆಯುಕ್ತರ ಕಛೇರಿ, ಸಾ.ಶಿ.ಇ. ಬೆಂಗಳೂರು
8. ನಿರ್ದೇಶಕರು, ಆಯುಕ್ತರ ಕಛೇರಿ, ಸಾ.ಶಿ.ಇ. ಗುಲ್ಬರ್ಗ
9. ನಿರ್ದೇಶಕರು, ಆರ್.ಎಂ.ಎಸ್.ಎ. ಬೆಂಗಳೂರು
10. ನಿರ್ದೇಶಕರು, ಮೈನಾರಿಟಿ, ಬೆಂಗಳೂರು
11. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ಬೆಂಗಳೂರು
12. ಜಂಟಿ ನಿರ್ದೇಶಕರು (ಆ) ಆಯುಕ್ತರ ಕಚೇರಿ, ಧಾರವಾಡ
13. ಸಹನಿರ್ದೇಶಕು, ಎಸ್.ಎಸ್.ಎ. ಬೆಂಗಳೂರು
14. ಸಹನಿರ್ದೇಶಕು, ಎಂ.ಎಂ.ಎಸ್, ಬೆಂಗಳೂರು
15. ಉಪನಿರ್ದೇಶಕರು, ಶಿಕ್ಷಕರ ಕಲ್ಯಾಣ ನಿಧಿ, ಬೆಂಗಳೂರು
16. ಬೆಳಗಾವಿ ಮತ್ತು ಗುಲ್ಬರ್ಗ ವಿಭಾಗದ ಜಿಲ್ಲಾ ಉಪನಿರ್ದೇಶಕರುಗಳು (ಆಡಳಿತ), ಉಪನಿರ್ದೇಶಕರು (ಅಭಿವೃದ್ಧಿ), ಹಾಗೂ ಡಿ.ವೈ.ಪಿ.ಸಿ.
17. ಕಾರ್ಯಕ್ರಮ ಅಧಿಕಾರಿಗಳು, ಎಸ್.ಎಸ್.ಎ. ಬೆಂಗಳೂರು
18. ಶ್ರೀ ಕೆ. ವಾಸುದೇವ್, ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ ವಿಭಾಗ), ರಾಜೀವ್ ಗಾಂಧೀ ಗ್ರಾಮೀಣ ವಸತಿ ನಿಗಮ ನಿಯಮಿತ, ಬೆಂಗಳೂರು.
19. ರಾಜೀವ್ ಗಾಂಧಿ ವಸತಿ ನಿಗಮದಡಿ ನಿರ್ಮಿತಿ ಕೇಂದ್ರದಲ್ಲಿ ಕೆಲಸ ಮಾಡುತ್ತಿರುವ ಜಿಲ್ಲಾ ಅಭಿಯಂತರರು.

***********

ಮಾನ್ಯ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಇವರು ಸಭೆಗೆ ಆಗಮಿಸಿದ ಎಲ್ಲ ಅಧಿಕಾರಿಗಳನ್ನು ಸ್ವಾಗತಿಸಿದರು. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಸಭೆಯ ವಿಷಯಪಟ್ಟಿ ಪ್ರಕಾರ ಈ ಕೆಳಗಿನ ವಿಷಯಗಳನ್ನು ಚರ್ಚಿಸಿ ಪ್ರಗತಿ ಪರಿಶೀಲಿಸಿದರು.

**ಶೈಕ್ಷಣಿಕ ಮೌಲ್ಯಮಾಪನ ಹಾಗೂ ಸಂದರ್ಶನ** :

ಆಗಸ್ಟ 2011ರಿಂದ ಅಕ್ಟೋಬರ್ 2011 ರವರೆಗೆ ಉಪನಿರ್ದೇಶಕರು/ಕ್ಷೇತ್ರ ಶಿಕ್ಷಣಾಧಿಕಾರಿಗಳ ಶೈಕ್ಷಣಿಕ ಮೌಲ್ಯಮಾಪನ, ಶಾಲಾ ಸಂದರ್ಶನಗಳು ಹಾಗೂ ತಪಾಸಣೆಗಳ ಕುರಿತು ಚರ್ಚಿಸಲಾಯಿತು. ಆಯುಕ್ತರು, ಮೌಲ್ಯಮಾಪನವು ನಿರಂತರವಾದ ಪ್ರಕ್ರಿಯೆಯಾಗಿದ್ದು, ಅಂಕಗಳನ್ನು ಪಡೆಯುವ ಉದ್ದೇಶದಿಂದ ಕೆಲಸ ನಿರ್ವಹಿಸದೇ ಶಾಲೆಗಳ ಶೈಕ್ಷಣಿಕ ಗುಣಮಟ್ಟವನ್ನು ಉತ್ತಮಪಡಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಕೆಲಸ ಮಾಡಲೇಬೇಕು ಅಂತ ನಿರ್ಧರಿಸಿದಲ್ಲಿ ಮಾತ್ರ ಗುರಿಯನ್ನು ಸಾಧಿಸಬಹುದು ಎಂದು ತಿಳಿಸಿದರು. ಅಂಕಗಳನ್ನು ನೀಡಿರುವುದು ಕೇವಲ ಸಾಂಕೇತಿಕವಾಗಿದೆ. ಎಲ್ಲ ಆಧಿಕಾರಿಗಳಿಗೆ ಶಾಲಾ ಮೌಲ್ಯ ಮಾಪನ ಹಾಗೂ ಶಾಲಾ ಸಂದರ್ಶನ ಕುರಿತಂತೆ ನಿರ್ವಹಿಸಬೇಕಾದ ಕನಿಷ್ಠ ಗುರಿಯನ್ನು ಸರ್ಕಾರದ ಸುತ್ತೋಲೆಯಂತೆ ನಿಗದಿಗೊಳಿಸಿದ್ದು, ಅದರಂತೆ ಬ್ಲಾಕ್ ಹಂತದಲ್ಲಿ ಬಿ.ಆರ್.ಸಿ. ಇ.ಸಿ.ಓ. ಬಿ.ಆರ್.ಪಿ. ಐ.ಇ.ಆರ್.ಟಿ. ಸಿ.ಆರ್.ಪಿ ಮತ್ತು ದೈಹಿಕ ಶಿಕ್ಷಣ ಅಧಿಕಾರಿಗಳು ತಮ್ಮ ಶಾಲಾ ಮೌಲ್ಯಮಾಪನ ಮತ್ತು ಸಂದರ್ಶನ ವರದಿ ಹಾಗೂ ದಿನಚರಿಗಳನ್ನು ತಮ್ಮ ಅವಲೋಕನಾಧಿಕಾರಿಗಳಾದ ಬಿ.ಇ.ಓ. ರವರಿಗೆ ನಿಗದಿತ ನಮೂನೆಯಲ್ಲಿ ಎರಡು ಪ್ರತಿಗಳಲ್ಲಿ ಸಲ್ಲಿಸಬೇಕು. ಬಿ.ಇ.ಓ. ರವರು ಈ ವರದಿಗಳನ್ನು ಪರಿಶೀಲಿಸಿ ಉಪನಿರ್ದೇಶಕರು (ಆಡಳಿತ) ರವರಿಗೆ ಸಲ್ಲಿಸಬೇಕು. ಅದರಂತೆ ಜಿಲ್ಲಾ ಹಂತದಲ್ಲಿ ಡಯಟ್, ಪ್ರಾಂಶುಪಾಲರು, ಶಿಕ್ಷಣಾಧಿಕಾರಿಗಳು, ವಿಷಯ ಪರಿವೀಕ್ಷಕರು, ಡಯಟ್ ನೋಡಲ್ ಅಧಿಕಾರಿಗಳು, ಬಿ.ಇ.ಓ. ಬಿ.ಆರ್.ಸಿ. ಇ.ಸಿ.ಓ. ಬಿ.ಆರ್.ಪಿ. ಐ.ಇ.ಆರ್.ಟಿ. ಸಿ.ಆರ್.ಪಿ ಮತ್ತು ದೈಹಿಕ ಶಿಕ್ಷಣ ಅಧಿಕಾರಿಗಳು ಮತ್ತು ವಿಷಯ ಪರಿವೀಕ್ಷಕರು (ಇತರೆ), ಡಿ.ವೈ.ಪಿ.ಸಿ. ಎ.ಪಿ.ಸಿ.ಓ. ಇವರುಗಳು ತಮ್ಮ ಶಾಲಾ ಮೌಲ್ಯಮಾಪನ ಮತ್ತು ಸಂದರ್ಶನ ವರದಿ ಹಾಗೂ ದಿನಚರಿಗಳನ್ನು ಉಪನಿರ್ದೇಶಕರಿಗೆ ಸಲ್ಲಿಸಬೇಕು. ಉಪನಿರ್ದೇಶಕರು (ಆಡಳಿತ) ಮತ್ತು ಉಪನಿರ್ದೇಶಕರು (ಅಭಿವೃದ್ದಿ) ಇವರು ನಿಗದಿತ ದಿನದಂದು ಒಟ್ಟಿಗೆ ಕಲೆತು ಅವಲೋಕನ ಮಾಡಿ ಹಾಗೂ ಮೌಲ್ಯಮಾಪನ ಮಾಡುವ ಕಾಲಕ್ಕೆ ಶಾಲೆಯಲ್ಲಿ ಇರುವ ನ್ಯೂನತೆಗಳು ಶಾಲೆಯ ಗುಣಮಟ್ಟ ಉತ್ತಮಪಡಿಸುವ ಕುರಿತು ತೆಗೆದುಕೊಳ್ಳಬಹುದಾದ ಕ್ರಮಗಳು ಹಾಗೂ ಶಾಲೆಯ ಸಮಸ್ಯೆಗಳು ಇತ್ಯಾದಿಗಳನ್ನೊಳಗೊಂಡ ವರದಿಯನ್ನು ವಿಭಾಗೀಯ ಸಹನಿರ್ದೇಶಕರಿಗೆ ಸಲ್ಲಿಸುವುದು. ವಿಭಾಗದ ಹಂತದಲ್ಲಿ ಉಪನಿರ್ದೇಶಕರು (ಆಡಳಿತ) ಮತ್ತು ಉಪನಿರ್ದೇಶಕರು (ಅಭಿವೃದ್ದಿ) ಇವರು, ಸಿ.ಟಿ.ಇ. ಪ್ರಾಂಶುಪಾಲರು ಹಾಗೂ ಸಹನಿರ್ದೇಶಕರ ಹಂತದ ಅಧಿಕಾರಿಗಳು ತಮ್ಮ ಶಾಲಾ ಮೌಲ್ಯಮಾಪನ ಮತ್ತು ಸಂದರ್ಶನ ವರದಿ ಹಾಗೂ ದಿನಚರಿಗಳನ್ನು ಎರಡು ಪ್ರತಿಗಳಲ್ಲಿ ವಿಭಾಗೀಯ ಸಹನಿರ್ದೇಶಕರಿಗೆ ಸಲ್ಲಿಸುವುದು. ಇವರು ಒಂದು ಪ್ರತಿಯನ್ನು ತಮ್ಮ ಬಳಿ ಇಟ್ಟುಕೊಂಡು ಉಪನಿರ್ದೇಶಕರು (ಆಡಳಿತ) ಮತ್ತು ಉಪನಿರ್ದೇಶಕರು (ಅಭಿವೃದ್ದಿ), ಸಿ.ಟಿ.ಇ. ಪ್ರಾಂಶುಪಾಲರು ಹಾಗೂ ಸಹನಿರ್ದೇಶಕರ ಹಂತದ ಅಧಿಕಾರಿಗಳಿಗೆ ನಿಗಧಿತ ನಮೂನೆಯಲ್ಲಿ ಸಲ್ಲಿಸುವುದು. ಸಹನಿರ್ದೇಶಕರು ಹಾಗೂ ಸಿ.ಟಿ.ಇ. ಪ್ರಾಂಶುಪಾಲರು ನಿಗಧಿತ ದಿನದಂದು ಸದರಿ ವರದಿಯನ್ನು ಅವಲೋಕನ ಮಾಡಬೇಕು.

ರಾಜ್ಯ ಹಂತದಲ್ಲಿ ನಿರ್ದೇಶಕರು, ಎಲ್ಲಾ ಸಹನಿರ್ದೇಶಕರು/ ಎಲ್ಲಾ ಸಿ.ಟಿ.ಇ. ಪಾಂಶುಪಾಲರು, ಉಪನಿರ್ದೇಶಕರು (ಆಡಳಿತ) ಮತ್ತು [ಅಭಿವೃದ್ಧಿ] ಇವರು ತಮ್ಮ ಶಾಲಾ ಮೌಲ್ಯಮಾಪನ ಮತ್ತು ಸಂದರ್ಶನ ವರದಿ ಹಾಗೂ ದಿನಚರಿಗಳನ್ನು ಆಯುಕ್ತರು/ಅಪರ ಆಯುಕ್ತರಿಗೆ ಪ್ರತಿ ತಿಂಗಳ 10ನೇ ತಾರೀಖಿನೊಳಗೆ ಸಲ್ಲಿಸುವುದು. ಎಲ್ಲ ಅವಲೋಕನಾಧಿಕಾರಿಗಳು ವರದಿಗಳನ್ನು ಕ್ರೋಢೀಕರಿಸಿ ಘೋಷ್ವಾರೆಯೊಂದಿಗೆ ಹಾಗೂ ಸ್ಪಷ್ಟ ಅಭಿಪ್ರಾಯದೊಂದಿಗೆ ಮೇಲ್ವಿಚಾರಣಾಧಿಕಾರಿಗಳಿಗೆ ಸಲ್ಲಿಸಬೇಕು ಮತ್ತು ಪರಿಶೀಲನಾ ಪ್ರಾಧಿಕಾರಿಗಳು ವರದಿಗಳನ್ನು ಪರಿಶೀಲಿಸಿ ಸೂಕ್ತ ಷರಾದೊಂದಿಗೆ ಸಂಬಂಧಿಸಿದ

ಪರಿವೀಕ್ಷಣಾಧಿಕಾರಿಗಳಿಗೆ ಹಿಂತಿರುಗಿಸಬೇಕು. ಸದರಿ ಷರಾಗಳಲ್ಲಿ ಪ್ರತಿ ತಿಂಗಳ ನಿಗಧಿತ ಗುರಿಯಂತೆ ಮಾಡಬೇಕಾದ ಮೌಲ್ಯಮಾಪನ, ಸಂದರ್ಶನ, ತಪಾಸಣೆಗಳನ್ನು ಮಾಡಲಾಗಿದೆಯೇ ಎಂಬುದನ್ನು ಪರಿಶೀಲಿಸುವುದು ಹಾಗೂ ಶಾಲಾ ಗುಣಮಟ್ಟ ಉತ್ತಮಪಡಿಸಲು ಕೈಗೊಳ್ಳಬೇಕಾದ ಮುಂದಿನ ಕ್ರಮಗಳ ಬಗ್ಗೆ ಸಹ ಸೂಚಿಸುವುದು ಹಾಗೂ ಸಂಬಂಧಿಸಿದ ವಿಭಾಗದ ಆಯುಕ್ತರು ಪ್ರತಿ ತಿಂಗಳ 15ನೇ ತಾರೀಖಿನೊಳಗೆ ಫಲಿತಾಂಶವನ್ನು ನೀಡಬೇಕು. ಎಂದು ಮಾನ್ಯ ಆಯುಕ್ತರು ಸೂಚಿಸಿದರು. ಶಾಲಾ ಸಂದರ್ಶನಗಳು ನಿಗದಿತ ಪ್ರಮಾಣದಲ್ಲಿ ನಡೆಯುತ್ತಿಲ್ಲ. ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿರುವ ಶಿಕ್ಷಣ ಸಂಯೋಜಕರನ್ನು ಶಾಲಾ ಸಂದರ್ಶನ ಕಾರ್ಯಕ್ಕೆ ಹಾಗೂ ಮೌಲ್ಯ ಮಾಪನ ಕಾರ್ಯಕ್ಕೆ ನೇಮಿಸುವಂತೆ ತಿಳಿಸಿದರು. ಎಲ್ಲ ಅಧಿಕಾರಿಗಳು ಶಾಲೆಗಳಿಗೆ ಸಂದರ್ಶನ ನೀಡುವ ಸಮಯದಲ್ಲಿ ಮತ್ತು ಶಾಲೆಗಳ ಮೌಲ್ಯಮಾಪನ ಮಾಡುವ ಕಾಲಕ್ಕೆ ಶಾಲೆಯಲ್ಲಿ ಶಿಕ್ಷಕರ ಕೊರತೆ ಇರುವುದನ್ನು ಹೊರತುಪಡಿಸಿ, ಶಾಲೆಗಳಲ್ಲಿ ಅಗ್ನಿನಂದಕಗಳಿವೆಯೇ? ಆ ಶಾಲೆಯಲ್ಲಿ ಶಿಕ್ಷಣ ಗುಣಮಟ್ಟ ಹೇಗಿದೆ? ಸಿಸ್ಟಮ್‌ನ ಸುಧಾರಣೆ ಹೇಗೆ ಮಾಡಬಹುದು? ಶಾಲಾ ಶಿಕ್ಷಣ ಗುಣಮಟ್ಟ ಸುಧಾರಣೆಗೆ ಏನು ಮಾಡಿದರೆ ಸೂಕ್ತ? ಶಿಕ್ಷಣ ಗುಣಮಟ್ಟ ಸುಧಾರಣೆಗೆ ಶಿಕ್ಷಕರಿಗೆ ಯಾವ ರೀತಿಯ ತರಬೇತಿಯ ಅವಶ್ಯಕತೆ ಇದೆ? ಈ ಬಗ್ಗೆ ಸರ್ಕಾರದಿಂದ ಏನಾದರೂ ಆದೇಶ ನೀಡುವ ಅವಶ್ಯಕತೆ ಇದೆಯೇ? ಬಿಸಿ ಊಟದ ವ್ಯವಸ್ಥೆ, ಹೆಣ್ಣುಮಕ್ಕಳ ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ ಆಟದ ಮೈದಾನ, ಕಾಂಪೌಂಡ್, ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ಕರೆತರಲು ಕೈಕೊಳ್ಳಬೇಕಾದ ಕ್ರಮಗಳು ಹಾಗೂ ಶಿಕ್ಷಕರು ಟಿ.ಎಲ್.ಎಂ. ಉಪಯೋಗಿಸಿ ಕಾರ್ಯ ನಿರ್ವಹಿಸಿದಲ್ಲಿ ಗುಣಮಟ್ಟ ಉತ್ತಮಗೊಳಿಸಲು ಸಾಧ್ಯವೆ? ಇತ್ಯಾದಿ ವಿಷಯಗಳ ಕುರಿತು ಸಮಾಲೋಚನೆ ನಡೆಸಿ, ಪ್ರತಿ ತಿಂಗಳು ಸಭೆ ನಡೆಸಿ ವರದಿ ನೀಡುವುದು.

ವಿಭಾಗದ ಸಹನಿರ್ದೇಶಕರುಗಳಿಂದ ಆಯಾ ವಿಭಾಗದ ಶೈಕ್ಷಣಿಕ ಮೌಲ್ಯಮಾಪನದ ವರದಿಗಳನ್ನು ಅವಲೋಕಿಸಲಾಯಿತು. ಗುಲ್ಬರ್ಗ, ರಾಯಚೂರು ಯಾದಗಿರಿ ಇವರು ಬಹಳ ಕಡಿಮೆ ಶಾಲಾ ಸಂದರ್ಶನ ಮಾಡಿರುತ್ತಾರೆ. ಕೊಪ್ಪಳದಿಂದ ಈಗಾಗಲೇ ತಿಳಿಸಿದ ಪದ್ಧತಿಯಲ್ಲಿ ಮಾಹಿತಿ ಬಂದಿರುವುದಿಲ್ಲ. ಸದರಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸರ್ಕಾರದ ಯಾವುದೇ ಯೋಜನೆಗಳನ್ನು ಸರಿಯಾಗಿ ಅನುಷ್ಠಾನಗೊಳಿಸುತ್ತಿಲ್ಲವೆಂದು ಆಯುಕ್ತರು ಖೇದ ವ್ಯಕ್ತಪಡಿಸಿದರು. ಈ ಬಗ್ಗೆ ಇರುವ ಸಮಸ್ಯೆಯನ್ನು ತಿಳಿಸುವಂತೆ ಸೂಚಿಸಿದರು. ಬೀದರ್ ಜಿಲ್ಲೆಯಿಂದ 10 ಮೌಲ್ಯಮಾಪನ ಕಾರ್ಯವಾಗಿದ್ದು, ಉತ್ತಮವಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು ಅದರಂತೆ ಬೆಳಗಾಂವ ವಿಭಾಗದ ಗದಗ, ಸಿರ್ಸಿ, ಕಾರವಾರ, ಬಿಜಾಪೂರ, ಬಾಗಲಕೋಟ ಜಿಲ್ಲೆಗಳಲ್ಲೂ ಮೌಲ್ಯಮಾಪನ ಮಾಡಿಲ್ಲದ ಕಾರಣ ಈ ಜಿಲ್ಲೆಗಳ ಫಲಿತಾಂಶ ಶೂನ್ಯ ಆಗಿರುತ್ತದೆ. ಶಾಲಾ ಸಂದರ್ಶನಕ್ಕೆ ಸಂಬಂಧಿಸಿದಂತೆ ಬಾಗಲಕೋಟ ಜಿಲ್ಲೆಯವರು ಅಕ್ಟೋಬರ್ ತಿಂಗಳಲ್ಲಿ 20 ಸಂದರ್ಶನ ಸಾಧಿಸಿರುವುದು ಹಾಗೂ ಹಾವೇರಿ ಜಿಲ್ಲೆಯಲ್ಲಿ 6 ಶಾಲೆಗಳ ಮೌಲ್ಯಮಾಪನ ಮಾಡಿರುವುದು ಸಂಶಯಾಸ್ಪದವಾಗಿದೆ ಎಂದು ಮಾನ್ಯ ಆಯುಕ್ತರು ಅಭಿಪ್ರಾಯ ವ್ಯಕ್ತಪಡಿಸಿದರು. ಬೆಳಗಾಂವ, ಚಿಕ್ಕೋಡಿ, ಬಿಜಾಪೂರ ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ ಜಿಲ್ಲೆಯ ಉಪನಿರ್ದೇಶಕರು ಶಾಲಾ ಸಂದರ್ಶನದಲ್ಲಿ ಆಗಸ್ಟ 2011 ರಿಂದ ಅಕ್ಟೊಬರ್ 2011ರವರೆಗೆ ಒಂದೇ ರೀತಿಯ ಸಾಧನೆಯನ್ನು ತೋರಿಸಿರುತ್ತಾರೆ, ಇದರಿಂದ ಮೌಲ್ಯಮಾಪನ ಕಾರ್ಯ ಸರಿಯಾಗಿ ನಿರ್ವಹಿಸಿರುವುದಿಲ್ಲ ಎಂದು ಕಂಡುಬರುತ್ತದೆ ಕೇವಲ ನಮೂನೆಯನ್ನು ಭರ್ತಿ ಮಾಡಲು ಮಾಹಿತಿಯನ್ನು ತುಂಬಲಾಗಿದೆ ಎಂದು ವಿಷಾದಿಸಿದರು. ಅಂಕ ಪಡೆಯುವ ಸಲುವಾಗಿ ಸಾಧನೆ ತೋರಿಸದೆ, ವಸ್ತುನಿಷ್ಠ ವರದಿಯನ್ನು ನೀಡಬೇಕೆಂದು ತಿಳಿಸಿದರು. ಪ್ರತಿ ಜಿಲ್ಲೆಯವರು ಪ್ರತಿ ತಿಂಗಳಿಗೆ

ಕನಿಷ್ಠ 1 ರಿಂದ 3 ಮೌಲ್ಯಮಾಪನ ಸಾಧನೆಯನ್ನು ಮಾಡುವ ಗುರಿಯನ್ನು ಹೊಂದಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

**ಸರ್ವ ಶಿಕ್ಷಣ ಅಭಿಯಾನ ಸಿವಿಲ್ ಕಾಮಗಾರಿ ಪ್ರಗತಿ ಪರಿಶೀಲನೆ :**
**ಕೆ.ಜಿ.ಬಿ.ವಿ. ಕಾಮಗಾರಿಗಳು:**

2011-12ನೇ ಸಾಲಿನಲ್ಲಿ ಕೆ.ಜಿ.ಬಿ.ವಿ. ಶಾಲೆಗಳ ನಿರ್ವಹಣೆಗಾಗಿ ಅನುದಾನ ಬಿಡುಗಡೆಯಾಗಿದ್ದು ಸದರಿ ಕಾರ್ಯಕ್ರಮ ಸುಗಮವಾಗಿ ನಡೆಯುವಂತೆ ನೋಡಿಕೊಳ್ಳಲು ಸರ್ಕಾರದಿಂದ ಈಗಾಗಲೇ ಸುತ್ತೋಲೆ ಹೊರಡಿಸಲಾಗಿದೆ. ಮಹಿಳಾ ಸಾಮುಖ್ಯ ವತಿಯಿಂದ ಕೆ.ಜಿ.ಬಿ.ವಿ. ಶಾಲೆಗಳ ನಿರ್ವಹಣೆಗಾಗಿ ಬಿಡುಗಡೆಯಾದ ಅನುದಾನವನ್ನು ಉದ್ದೇಶಿತ ಕಾರ್ಯಕ್ಕೆ ಬಳಸಬೇಕಾಗಿದ್ದು, ಪ್ರತಿ ತಿಂಗಳ ಪ್ರಗತಿ ವರದಿಯನ್ನು ಸಂಬಂಧಿಸಿದ ಬ್ಲಾಕನ ಬಿ.ಇ.ಓ. ಮತ್ತು ಬಿ.ಆರ್.ಸಿ. ಹಾಗೂ ಜಿಲ್ಲೆಯ ಉಪನಿರ್ದೇಶಕರು ಮತ್ತು ಡಿ.ವೈ.ಪಿ.ಸಿ. ಯವರು ಮಹಿಳಾ ಸಾಮುಖ್ಯ ಕೇಂದ್ರ ಕಛೇರಿಯ ಅಧಿಕಾರಿಗಳನ್ನು ಸಂಪರ್ಕಿಸಿ ಮಾಹಿತಿ ಪಡೆಯಲು ಸೂಚಿಸಲಾಯಿತು. ಈ ಬಗ್ಗೆ ಸುದೀರ್ಘವಾಗಿ ಚರ್ಚೆ ಮಾಡಿ ಎಲ್ಲ ಜಿಲ್ಲೆಗಳ ಕೆ.ಜಿ.ಬಿ.ವಿ. ವಸತಿ ಶಾಲೆಗಳ ಕಾರ್ಯಚಟುವಟಿಕೆಗಳ ಹಾಗೂ ಖರ್ಚು ವೆಚ್ಚಗಳ ಕುರಿತು ಪರಿಶೀಲಿಸಲಾಯಿತು. ಇಂತಹ ಸಭೆಗೆ ಮಹಿಳಾ ಸಾಮುಖ್ಯ ಕಛೇರಿಯ ಅಧಿಕಾರಿಗಳನ್ನೂ ಸಹ ಹಾಜರಿರಲು ತಿಳಿಸಬೇಕಿತ್ತು ಎಂದು ಅಪರ ಆಯುಕ್ತರು, ಧಾರವಾಡ ಇವರು ಅಭಿಪ್ರಾಯ ಪಟ್ಟರು. ಶ್ರೀ ಹರೀಶ್ ಹಂದೆ ಇವರ ಸೆಲ್ಕೋ ಕಂಪನಿಯಿಂದ ಪ್ರತಿ ಶಾಲೆಗೆ ರಿಯಾಯತಿ ದರದಲ್ಲಿ ಅಳ್ನಾವರ ಮತ್ತು ಗಂಜಿಗಟ್ಟಿ ಕೆ.ಜಿ.ಬಿ.ವಿ. ಶಾಲೆಗಳಲ್ಲಿ ಸೋಲಾರ್ ದೀಪಗಳನ್ನು ಒದಗಿಸಲಾಗಿದ್ದು ಇದು ಬಹಳ ಯಶಸ್ವಿಯಾಗಿ ನಡೆಯುತ್ತಿದೆ. ಇದರಂತೆ ಇತರ ಶಾಲೆಗಳಿಗೂ ಒದಗಿಸುವ ಕುರಿತು ಅಪರ ಆಯುಕ್ತರು, ಧಾರವಾಡ ಇವರು ಸಭೆಯ ಗಮನಕ್ಕೆ ತಂದರು. (ಕ್ರಮ: ಸಂಬಂಧಿಸಿದ ಡಿ.ವೈ.ಪಿ.ಸಿ, ಮತ್ತು ಉಪನಿರ್ದೇಶಕರು)

ಕೆ.ಜಿ.ಬಿ.ವಿ. ಶಾಲೆಗಳ ನಿರ್ಮಾಣ ಯೋಜನೆಯಡಿ ರಾಯಚೂರು ಜಿಲ್ಲೆಯಲ್ಲಿ ಭಾಗಶ: ಹಣ ಖರ್ಚು ಮಾಡಲಾಗಿದೆ. ಈ ಬಗ್ಗೆ ಕೊರತೆ ಬೀಳುವ ಹಣವನ್ನು ಸಾಮಾನ್ಯ ಗೋಡೆಯಿಂದಾಗಿ ಉಳಿಕೆಯಿಂದ ಉಳಿದ ಹಣದಲ್ಲಿ ಉಪಯೋಗಿಸಿಕೊಳ್ಳುವ ಕುರಿತು ಡಿ.ಐ.ಸಿ. ಸಭೆಯಲ್ಲಿ ಮಂಡಿಸಿ ಅದೇಶ ಪಡೆದುಕೊಂಡು ಕೆಜಿಬಿವಿ ಬಾಕಿ ಕಟ್ಟಡ ಕಾಮಗಾರಿಗಳನ್ನು ಪೂರ್ಣಗೊಳಿಸುವಂತೆ ತಿಳಿಸಲಾಯಿತು. ಇದಕ್ಕೆ ಸರ್ವ ಶಿಕ್ಷಣ ಅಭಿಯಾನದಿಂದ ಪ್ರತ್ಯೇಕ ಅನುಮೋದನೆ ನೀಡುವ ಅಗತ್ಯ ಇರುವುದಿಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸಲಾಯಿತು. ಸಿಂಧನೂರಿನಲ್ಲಿ ಏಜೆನ್ಸಿ ಬದಲಾಯಿಸುವ ಕುರಿತು ಉಪನಿರ್ದೇಶಕರು ಸಭೆಯ ಗಮನಕ್ಕೆ ತಂದಾಗ, ಸಿಂಧನೂರಿನಲ್ಲಿ ಕ್ಯಾಶ್ಯೂಟೆಕ್ ಮೂಲಕ ಕಟ್ಟಡ ನಿರ್ಮಾಣ ಮಾಡಲು ತಿಳಿಸಲಾಯಿತು. ವಿವಿಧ ಹಂತದಲ್ಲಿ ಬಾಕಿ ಉಳಿದ ಕಾಮಗಾರಿಗಳನ್ನು ಎಸ್.ಡಿ.ಎಂ.ಸಿ. ವತಿಯಿಂದಲೇ ಪೂರ್ಣಗೊಳಿಸಲು ಕ್ರಮ ಕೈಗೊಳ್ಳುವುದು ಹಾಗೂ ಹೊಸದಾಗಿ ಪ್ರಾರಂಭಿಸಬೇಕಾದ ಕಾಮಗಾರಿಗಳನ್ನು ಕ್ಯಾಶ್ಯೂಟೆಕ್ ಏಜೆನ್ಸಿಗೆ ನೀಡಿ, ಕಾಮಗಾರಿ ಪೂರ್ಣಗೊಳಿಸಿಕೊಳ್ಳುವಂತೆ ಆಯುಕ್ತರು, ಬೆಂಗಳೂರು ರವರು ತಿಳಿಸಿದರು. ಡಿ.ಐ.ಸಿ. ಯ ಅನುಮತಿ ಪಡೆದು ಖರ್ಚು ಕಡಿಮೆಮಾಡಿಕೊಳ್ಳಲು ಫ್ಲೈ-ಆಶ್ ಮಾದರಿಯಂತೆ ಕಟ್ಟಡ ಕಾಮಗಾರಿ ನಿರ್ಮಿಸಲು ಸೂಚಿಸಲಾಯಿತು. (ಕ್ರಮ: ಡಿ.ವೈ.ಪಿ.ಸಿ, ಮತ್ತು ಉಪನಿರ್ದೇಶಕರು, ರಾಯಚೂರು.)

**2008-09ನೇ ಸಾಲಿನ ಹೊಸ ಶಾಲೆಗಳ ಕಟ್ಟಡ ನಿರ್ಮಾಣ:**

2008-09ನೇ ಸಾಲಿಗೆ ಹೊಸ ಶಾಲೆಗಳ ಕಟ್ಟಡ ನಿರ್ಮಾಣ ಪ್ರಗತಿಯನ್ನು ಪರಿಶೀಲಿಸಲಾಗಿ, ಬಿಜಾಪೂರ ಜಿಲ್ಲೆಯಲ್ಲಿ ಹೊಸ ಶಾಲಾ ಕಟ್ಟಡ ಅನೇಕ ತಿಂಗಳುಗಳಿಂದ ಪ್ರಗತಿಯಲ್ಲಿ ಇರುತ್ತದೆ ಎಂದು ತೋರಿಸಿದ್ದನ್ನು ಗಮನಿಸಿ, ಉಪನಿರ್ದೇಶಕರು ಸಹಾ ಈ ಕುರಿತು ವೈಯುಕ್ತಿಕ ಗಮನಹರಿಸುವಂತೆ ತಿಳಿಸಿದರು. ಮತ್ತು ಡಿಸೆಂಬರ್-2011 ಅಂತ್ಯದೊಳಗೆ ಈ ಕಾರ್ಯವನ್ನು ಪೂರ್ಣಗೊಳಿಸುವಂತೆ ತಿಳಿಸಿದರು.

(ಕ್ರಮ: ಉಪನಿರ್ದೇಶಕರು, ವಿಜಾಪುರ)

ಯಾದಗಿರಿ ಜಿಲ್ಲೆಯಲ್ಲಿ 2008-09ನೇ ಸಾಲಿಗೆ 6 ಹೊಸ ಶಾಲಾ ಕಟ್ಟಡಗಳ ನಿರ್ಮಾಣ ಬಾಕಿ ಉಳಿದಿದ್ದು, ಇವುಗಳಲ್ಲಿ 3 ಮುಕ್ತಾಯದ ಹಂತದಲ್ಲಿದ್ದು 2 ಕ್ಕೆ ಜಾಗದ ಸಮಸ್ಯೆ ಇದ್ದು ಒಂದು ನ್ಯಾಯಾಲಯದಲ್ಲಿ ಬಾಕಿ ಇದೆ ಎಂದು ಸಂಬಂಧಿಸಿದ ಉಪನಿರ್ದೇಶಕರು ವಿವರಿಸಿದಾಗ ನ್ಯಾಯಾಲಯ ಪ್ರಕರಣ ಇರುವಂತ ಜಾಗೆಯ ಬಗ್ಗೆ ಸಂಬಂಧಪಟ್ಟವರನ್ನು ವೈಯಕ್ತಿಕವಾಗಿ ಸಂಪರ್ಕಿಸಿ ಸಮಸ್ಯೆ ಇತ್ಯರ್ಥಪಡಿಸಿಕೊಂಡು ಕಾಮಗಾರಿ ಕೈಗೊಳ್ಳುವಂತೆ ತಿಳಿಸಲಾಯಿತು. ಹಾಗೂ ಜಾಗದ ಸಮಸ್ಯೆ ಇದ್ದಲ್ಲಿ ಬೇರೆ ಕಡೆ ಜಾಗವನ್ನು ಪಡೆಯುವ ಬಗ್ಗೆ ಸಂಬಂಧಿಸಿದ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಡಿಸೆಂಬರ್-2011 ರ ಅಂತ್ಯದೊಳಗೆ ಈ ಮೂರು ಕಟ್ಟಡ ಕಾಮಗಾರಿಗಳನ್ನು ಪೂರ್ಣಗೊಳಿಸುವಂತೆ ಕ್ರಮ ಕೈಗೊಳ್ಳಲು ಸೂಚಿಸಲಾಯಿತು. (ಕ್ರಮ: ಉಪನಿರ್ದೇಶಕರು, ಯಾದಗಿರ್)

**2008-09ನೇ ಸಾಲಿನ ಹೆಚ್ಚುವರಿ ಕೊಠಡಿಗಳ ನಿರ್ಮಾಣ:**

2008-09ನೇ ಸಾಲಿಗೆ ಹೆಚ್ಚುವರಿ ಕೊಠಡಿಗಳ ನಿರ್ಮಾಣ ಯೋಜನೆಯಡಿ ಬಾಗಲಕೋಟೆ ಜಿಲ್ಲೆಯ ಹುನಗುಂದದಲ್ಲಿ ಊರವರಿಂದ ಸಮಸ್ಯೆ ಇದೆ ಎಂದು ಉಪನಿರ್ದೇಶಕರು ತಿಳಿಸಲಾಗಿ, ಈ ಕುರಿತು ಊರವರ ಮನವೊಲಿಸಿ ಕಟ್ಟಡ ನಿರ್ಮಾಣ ಕಾರ್ಯ ಪೂರ್ಣಗೊಳಿಸುವಂತೆ ತಿಳಿಸಲಾಯಿತು. ಒಪ್ಪದಿದ್ದಲ್ಲಿ ಜಾಗ ಬದಲಾಯಿಸಿ ಕಟ್ಟಡ ನಿರ್ಮಿಸುವಂತೆ ತಿಳಿಸಲಾಯಿತು.

(ಕ್ರಮ: ಉಪನಿರ್ದೇಶಕರು, ಬಾಗಲಕೋಟ)

ಕೆಲವು ಜಿಲ್ಲಾ ಉಪನಿರ್ದೇಶಕರು, ಡಿ.ಐ.ಸಿ. ಯಿಂದ ನಿವೇಶನ ಆಯ್ಕೆಗೆ ಅನುಮೋದನೆಯನ್ನು ವಿಳಂಬವಾಗಿ ನೀಡಿರುತ್ತಾರೆ ಹಾಗೂ ಕೆಲವು ಜಿಲ್ಲೆಗಳಲ್ಲಿ ಬೇರೆ ಜಾಗವನ್ನು ಸೂಚಿಸಿರುತ್ತಾರೆ ಎಂದು ವಿವರಿಸಿದಾಗ, ನಿವೇಶನದ ಆಯ್ಕೆ ಮಾಡುವ ಪೂರ್ವದಲ್ಲಿ ಡಿ.ಐ.ಸಿ.ಯವರ ಅನುಮೋದನೆ ಪಡೆದು, ಕಟ್ಟಡ ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಬೇಕು. ಒಂದು ವೇಳೆ ಡಿಸೆಂಬರ್ ಅಂತ್ಯದೊಳಗಾಗಿ ಈ ಎಲ್ಲ ಕಾಮಗಾರಿಗಳನ್ನು ಪೂರ್ಣಗೊಳಿಸುವದು.

(ಕ್ರಮ: ಎಲ್ಲ ಜಿಲ್ಲೆಗಳ ಉಪನಿರ್ದೇಶಕರು, ಡಿ.ವೈ.ಪಿ.ಸಿ.)

ಕೊಪ್ಪಳ ಜಿಲ್ಲೆಯ ಶಾಲಾ ಕಟ್ಟಡವನ್ನು ದಾನ ಕೊಟ್ಟ ಜಾಗೆಯಲ್ಲಿ ಕಟ್ಟುತ್ತಿದ್ದು, ಪ್ಲಿಂತ್ ಮಟ್ಟದವರೆಗೆ ಕಾಮಗಾರಿ ಆಗಿ, ಜಾಗ ನೋಂದಣಿಯಾಗದ ಕಾರಣ ನಿಂತುಹೋಗಿರುತ್ತದೆ ಎಂದು ಸಂಬಂಧಿಸಿದ ಉಪನಿರ್ದೇಶಕರು ವಿವರಿಸಿದಾಗ ಈ ಬಗ್ಗೆ ಆರ್.ಟಿ.ಸಿ. ಯಲ್ಲಿ ದಾನ ಕೊಟ್ಟ ಭೂಮಿಯ ಬಗ್ಗೆ ನೋಂದಣಿ ಇರುವುದನ್ನು ಖಚಿತಪಡಿಸಿಕೊಳ್ಳುವುದು, ನೋಂದಣಿಯಾಗಿರದಿದ್ದಲ್ಲಿ ಸಂಬಂಧಿಸಿದ ಜಿಲ್ಲಾಧಿಕಾರಿಗಳನ್ನು ಸಂಪರ್ಕಿಸಿ, ಭೂದಾಖಲೆಗೆ ರುಜುವನ್ನು ಪಡೆದು ಕಾಮಗಾರಿ ಪ್ರಾರಂಭಿಸುವಂತೆ ಅಪರ ಆಯುಕ್ತರು, ಗುಲ್ಬರ್ಗ ಇವರಿಗೆ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

(ಕ್ರಮ: ಅಪರ ಆಯುಕ್ತರು, ಗುಲ್ಬರ್ಗ ಹಾಗೂ ಉಪನಿರ್ದೇಶಕರು, ಕೊಪ್ಪಳ)

ರಾಯಚೂರಿನಲ್ಲಿ ಎರಡು ಶಾಲಾ ಕೊಠಡಿಗಳು ಇನ್ನೂ ಪ್ರಾರಂಭವಾಗದೇ ಇದ್ದು ಇವುಗಳಲ್ಲಿ ದೇವದುರ್ಗದಲ್ಲಿ ಕಳೆದ ತಿಂಗಳಲ್ಲಿ ಕಟ್ಟಡ ಕಾಮಗಾರಿ ಪ್ರಾರಂಭಿಸಲಾಗಿದೆ. ಚಿಂತಮಾನದೊಡ್ಡಿ ಇಲ್ಲಿ ಜಾಗ ಮುಳುಗಡೆಯಾಗಿದ್ದು ಯಾವುದೇ ಕಟ್ಟಡ ಕಾರ್ಯ ಕೈಗೊಳ್ಳದಂತೆ ಸೂಚನೆ ನೀಡಲಾಗಿದೆ. ಆದರೆ ಈಗಾಗಲೇ ಸದರಿ ಶಾಲಾ ಕಟ್ಟಡ ಕಾಮಗಾರಿಗೆ ಸರ್ಕಾರದಿಂದ ರೂ.3.60 ಲಕ್ಷ ಅನುದಾನ ಲಭ್ಯವಿದ್ದು ರೂ.60,000/- ಕಟ್ಟಡ ಕಾಮಗಾರಿಯಾಗಿ ಖರ್ಚುಮಾಡಲಾಗಿದೆ, ಈಗ ಸ್ಥಳಾಂತರಿಸಲಾದ ಹೊಸ ಜಾಗದಲ್ಲಿ ಕಟ್ಟಡ ಕಾಮಗಾರಿಯ ಕಾರ್ಯವನ್ನು ಕೈಗೊಳ್ಳಲಾಗುವುದೆಂದು ಸಂಬಂಧಿಸಿದ ಉಪನಿರ್ದೇಶಕರು ವಿವರಿಸಿದಾಗ ಜಾಗ ಮುಳುಗಡೆ ಆಗುವ ಬಗ್ಗೆ ಮೊದಲೇ ತಿಳಿದಿದ್ದರೂ ಸಹ ಸದರಿ ಶಾಲೆಗೆ ರೂ.60,000/- ಖರ್ಚು ಮಾಡಬಾರದಿತ್ತು, ಈ ಉಳಿದ 3.00 ಲಕ್ಷದಲ್ಲಿ ಸ್ಥಳಾಂತರಿಸಲಾದ ಹೊಸ ಜಾಗದಲ್ಲಿ ಹೆಚ್ಚುವರಿ ಕೊಠಡಿಗಳನ್ನು ಕಟ್ಟಲು ಅನುದಾನ ಸಾಕಾಗುವುದಿಲ್ಲ ಆದ್ದರಿಂದ ಸದರಿ ಹಣವನ್ನು ಆಧ್ಯರ್ಪಣೆ ಮಾಡಬಹುದಾಗಿದೆ ಎಂದು ಸೂಚಿಸಲಾಯಿತು. 2008-09, 2009-10ನೇ ಸಾಲಿನ ಕಾಮಗಾರಿಗಳನ್ನು ಪೂರ್ಣಗೊಳಿಸಿದ ಬಗ್ಗೆ ಎಲ್ಲ ಉಪನಿರ್ದೇಶಕರು ನೀಡಿದ ಮಾಹಿತಿ ಪ್ರಕಾರ ಎಂ.ಎಚ್.ಆರ್.ಡಿ. ಕಳಿಸಲಾಗಿದೆ, ಎಂ.ಎಚ್.ಆರ್.ಡಿ. ಗೆ ಅಧಿಕಾರಿಗಳು ಯಾವುದೇ ಸಮಯದಲ್ಲಿ ಇದನ್ನು ಖುದ್ದಾಗಿ ಬಂದು ಪರಿಶೀಲಿಸಿದಾಗ ತಪ್ಪು ಮಾಹಿತಿ ಇರುವುದು ಕಂಡು ಬಂದಲ್ಲಿ ಇದಕ್ಕೆ ಸಂಬಂಧಿಸಿದ ಉಪನಿರ್ದೇಶಕರೇ ಜವಾಬ್ದಾರಾಗುತ್ತಾರೆಂದು ಆಯುಕ್ತರು ಎಚ್ಚರಿಕೆ ನೀಡಿದರು. ಯಾದಗಿರಿ ಜಿಲ್ಲೆಯಲ್ಲಿ 22 ಹೆಚ್ಚುವರಿ ಕೊಠಡಿಗಳ ಕಾಮಗಾರಿ ಪ್ರಗತಿಯಲ್ಲಿದ್ದು, ಇವುಗಳಲ್ಲಿ 10 ಕೊಠಡಿಗಳು ಮುಕ್ತಾಯದ ಹಂತದಲ್ಲಿವೆ, ಮತ್ತು 4 ಕೊಠಡಿಗಳು ಕೆ.ಜಿ.ಬಿ.ವಿ. ನಲ್ಲಿ ಬಾಕಿ ಉಳಿದಿದೆ ಇದರಲ್ಲಿ ಒಂದು ಶಾಲೆಯಲ್ಲಿ ಸಂಬಂಧಿಸಿದ ಮುಖ್ಯೋಪಾಧ್ಯಾಯರಿಂದ ಹಣ ದುರುಪಯೋಗವಾಗಿದ್ದು, ಸದರಿಯವರು ಮರಣಹೊಂದಿದ್ದಾರೆಂದು ವಿವರಿಸಿದಾಗ ಈ ಬಗ್ಗೆ ಸದರಿ ಮುಖ್ಯೋಪಾಧ್ಯಾಯರ ನಿವೃತ್ತಿ ವೇತನ ಸೌಲಭ್ಯಗಳಿಂದ ಹಣವನ್ನು ವಸೂಲಿ ಮಾಡಲು ಸಂಬಂಧಿಸಿದ ಸಿ.ಎ.ಇ.ಓ. ರವರಿಗೆ ಜವಾಬ್ದಾರಿ ನೀಡುವಂತೆ ತಿಳಿಸಲಾಯಿತು. ಹಾಗೂ ಉಳಿದ 2 ಕೊಠಡಿಗಳನ್ನು ಇನ್ನೂ ಪ್ರಾರಂಭಿಸದೇ ಇದ್ದು, ಈ ತಿಂಗಳಿನಲ್ಲಿ ಪ್ರಾರಂಭಿಸಲಾಗಿದೆ ಎಂದು ಸಂಬಂಧಿಸಿದ ಉಪನಿರ್ದೇಶಕರು ತಿಳಿಸಿದರು.

(ಕ್ರಮ: ಉಪನಿರ್ದೇಶಕರು, ಯಾದಗಿರಿ)

ಬಳ್ಳಾರಿಯಲ್ಲಿ 2 ಹೆಚ್ಚುವರಿ ಕೊಠಡಿಗಳ ಕಾಮಗಾರಿ ಬಾಕಿ ಇದ್ದು ಜಾಗದ ಸಮಸ್ಯೆ ಇದ್ದು, ಜನವರಿ ಅಂತ್ಯದಲ್ಲಿ ಜಾಗದ ಸಮಸ್ಯೆಯನ್ನು ಬಗೆಹರಿಸಿಕೊಂಡು ಜನವರಿ-2012ರ ಅಂತ್ಯದೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸುವುದಾಗಿ ಸಂಭಂಧಿಸಿದ ಉಪನಿರ್ದೇಶಕರು ತಿಳಿಸಿದರು. ಅದರಂತೆ ಗುಲ್ಬರ್ಗದಲ್ಲಿ 15 ಹೆಚ್ಚುವರಿ ಕೊಠಡಿ ಕಾಮಗಾರಿ ಬಾಕಿ ಇದ್ದು, ಈಗ ಎಲ್ಲವನ್ನು ಪ್ರಾರಂಭಿಸಲಾಗಿದ್ದು ಡಿಸೆಂಬರ್ ಅಂತ್ಯದೊಳಗೆ ಕಾಮಗಾರಿ ಪೂರ್ಣಗೊಳಿಸಲಾಗುವುದೆಂದು ಉಪನಿರ್ದೇಶಕರು ತಿಳಿಸಿದರು. ಕೊಪ್ಪಳದಲ್ಲಿ ಬಾಕಿ ಉಳಿದ 5 ಹೆಚ್ಚುವರಿ ಕೊಠಡಿಗಳಲ್ಲಿ 3 ಪೂರ್ಣಗೊಂಡಿದ್ದು ಎರಡನ್ನು ಡಿಸೆಂಬರ್-2011 ರ ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದೆಂದು ತಿಳಿಸಿದರು.

(ಕ್ರಮ: ಸಂಬಂಧಪಟ್ಟ ಉಪನಿರ್ದೇಶಕರು)

ಒಟ್ಟಿನಲ್ಲಿ ಎಲ್ಲ ಜಿಲ್ಲಾ ಉಪನಿರ್ದೇಶಕರುಗಳು 2008-09ನೇ ಸಾಲಿಗೆ ಬಾಕಿ ಉಳಿದ ಎಲ್ಲ ಹೊಸ ಮತ್ತು ಹೆಚ್ಚುವರಿ ಕೊಠಡಿಗಳ ಕಾಮಗಾರಿಗಳನ್ನು ಡಿಸೆಂಬರ್-2011 ಅಂತ್ಯದೊಳಗೆ ಪೂರ್ಣಗೊಳಿಸಿ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸುವಂತೆ ತಿಳಿಸಲಾಯಿತು.

**2009-10ನೇ ಸಾಲಿನ ಹೊಸ ಶಾಲೆಗಳ ಕಟ್ಟಡ ನಿರ್ಮಾಣ :**

ಈ ಬಗ್ಗೆ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಲಾಯಿತು. ಬೆಳಗಾಂವ ವಿಭಾಗದ ಬಿಜಾಪೂರ ಜಿಲ್ಲೆಯಲ್ಲಿ 2, ಬೆಳಗಾಂವ-1, ಬಾಗಲಕೋಟೆ-1, ಹೊಸ ಶಾಲಾ ಕಟ್ಟಡಗಳ ಕಾಮಗಾರಿ ಬಾಕಿ

ಉಳಿದಿದ್ದು ಡಿಸೆಂಬರ್ ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದೆಂದು ಸಂಬಂಧಿಸಿದ ಉಪನಿರ್ದೇಶಕರು ತಿಳಿಸಿದರು.

**2009-10ನೇ ಸಾಲಿನ ಹೆಚ್ಚುವರಿ ಕೊಠಡಿಗಳ ನಿರ್ಮಾಣ:**

ಬೆಳಗಾಂವ ವಿಭಾಗದ ಬಿಜಾಪೂರ-1, ಚಿಕ್ಕೋಡಿ-3, ಉತ್ತರ ಕನ್ನಡ-2, ಬೆಳಗಾಂವ-1, ಬಾಗಲಕೋಟ-4 ಹೆಚ್ಚುವರಿ ಕೊಠಡಿಗಳ ಕಾಮಗಾರಿ ಬಾಕಿ ಉಳಿದಿದ್ದು ಡಿಸೆಂಬರ್ ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದೆಂದು ಸಂಬಂಧಿಸಿದ ಉಪನಿರ್ದೇಶಕರಿಗೆ ತಿಳಿಸಿದರು. ಧಾರವಾಡ ಜಿಲ್ಲೆಯಲ್ಲಿ 6 ಪ್ರಕರಣಗಳು ನ್ಯಾಯಾಲಯದಲ್ಲಿ ಇದ್ದು ಈಗ ಇತ್ಯರ್ಥಗೊಂಡಿದ್ದು ಈ ಎಲ್ಲ ಶಾಲೆಗಳ ಹೆಚ್ಚುವರಿ ಕೊಠಡಿಗಳನ್ನು ಸದ್ಯದಲ್ಲೇ ಪ್ರಾರಂಭಿಸಲಾಗುವುದೆಂದು ಉಪನಿರ್ದೇಶಕರು, ಧಾರವಾಡ ಇವರು ತಿಳಿಸಿದರು. ರಾಯಚೂರು-24, ಬೀದರ್-103, ಯಾದಗಿರಿ-62, ಕಾಮಗಾರಿಗಳು ಬಾಕಿ ಉಳಿದಿದ್ದು ಈ ತಿಂಗಳ ಅಂತ್ಯದೊಳಗೆ ಮುಗಿಸಲಾಗುವುದೆಂದು ಉಪನಿರ್ದೇಶಕರು ತಿಳಿಸಿದರು. ಗುಲ್ಬರ್ಗದಲ್ಲಿ 8 ಹೆಚ್ಚುವರಿ ಕೊಠಡಿಗಳು ಪ್ರಾರಂಭವಾಗದೇ ಇದ್ದು, ಈ ಎಲ್ಲವನ್ನೂ ಪ್ರಾರಂಭಿಸಲಾಗಿದೆ. 112 ಪ್ರಗತಿಯಲ್ಲಿದ್ದು 70 ಪೂರ್ಣಗೊಂಡಿವೆ ಎಂದು ವಿವರಿಸಿದಾಗ 2009-10ನೇ ಸಾಲಿನ ಕಾಮಗಾರಿಗಳನ್ನು ನವೆಂಬರ್, 30 ರೊಳಗಾಗಿ ಪೂರ್ಣಗೊಳಿಸದಿದ್ದಲ್ಲಿ ಸಂಬಂಧಿಸಿದ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಲಾಗುವುದೆಂದು ಆಯುಕ್ತರು, ಬೆಂಗಳೂರು ಇವರು ತಿಳಿಸಿದರು. ಒಟ್ಟಿನಲ್ಲಿ ಎಲ್ಲ ಜಿಲ್ಲಾ ಉಪನಿರ್ದೇಶಕರುಗಳು 2009-10ನೇ ಸಾಲಿಗೆ ಬಾಕಿ ಉಳಿದ ಎಲ್ಲ ಹೊಸ ಮತ್ತು ಹೆಚ್ಚುವರಿ ಕೊಠಡಿಗಳ ಕಾಮಗಾರಿಗಳನ್ನು ನವಂಬರ್-2011 ಅಂತ್ಯದೊಳಗೆ ಪೂರ್ಣಗೊಳಿಸಿ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸುವಂತೆ ತಿಳಿಸಲಾಯಿತು.

(ಕ್ರಮ: ಎಲ್ಲ ಉಪನಿರ್ದೇಶಕರು)

**2010-11ನೇ ಸಾಲಿನ ಹೊಸ ಶಾಲಾ ಕಟ್ಟಡಗಳು:**

ಧಾರವಾಡ ಜಿಲ್ಲೆಯಲ್ಲಿ 2 ಕಾಮಗಾರಿಗಳು ನಿವೇಶನ ಲಭ್ಯವಿಲ್ಲದ ಕಾರಣ ಬಾಕಿ ಇದೆ ಎಂದು ವಿವರಿಸಿದಾಗ ಸಂಬಂಧಪಟ್ಟ ಊರವರವನ್ನು ಸಂಪರ್ಕಿಸಿ ಜಾಗವನ್ನು ಕೊಡುವಂತೆ ಮನವೊಲಿಸುವುದು. ಬೆಳಗಾಂವ ಜಿಲ್ಲೆಯಲ್ಲಿ 2 ಕಾಮಗಾರಿ ಬಾಕಿ ಇದ್ದು, ಖಾನಾಪುರದಲ್ಲಿ ಈ ತಿಂಗಳ ಅಂತ್ಯದೊಳಗೆ ಪ್ರಾರಂಭಿಸಲಾಗುವುದು. ಇನ್ನೊಂದು ಕಾಮಗಾರಿಗೆ ನಿವೇಶನ ಲಭ್ಯವಿಲ್ಲವೆಂದು ತಿಳಿಸಿದ ಕಾರಣ, ಈ ವಿಷಯದ ಕುರಿತು ಸಂಬಂಧಿಸಿದ ಶಾಸಕರನ್ನು ಸಂಪರ್ಕಿಸಿ ಸಮಸ್ಯೆ ಬಗೆಹರಿಸಿಕೊಂಡು, ಕಾಮಗಾರಿ ಪ್ರಾರಂಭಿಸಲು ತಿಳಿಸಲಾಯಿತು. ಒಟ್ಟಾರೆ ಬಾಡಿಗೆ ಕಟ್ಟಡದಲ್ಲಿ ಶಾಲೆಗಳನ್ನು ನಡೆಸಲು ಅವಕಾಶ ನೀಡದಂತೆ ನೋಡಿಕೊಳ್ಳುವುದು. ಚಿಕ್ಕೋಡಿ- 32 ರಲ್ಲಿ 28 ಪೂರ್ಣಗೊಂಡಿದೆ ಉಳಿದವುಗಳನ್ನು ಡಿಸೆಂಬರ್-2011ರ ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದೆಂದು ಉಪನಿರ್ದೇಶಕರು ತಿಳಿಸಿದರು. ಬಿಜಾಪೂರ-8 ಇನ್ನೂ ಪ್ರಾರಂಭಿಸದೇ ಇದ್ದು, ಈ ವರ್ಷ ನಿವೇಶನ ಗುರ್ತಿಸಿ ಪ್ರಾರಂಭಿಸಲಾಗುವುದೆಂದು ಉಪನಿರ್ದೇಶಕರು ತಿಳಿಸಿದರು.

ಬಾಗಲಕೋಟ - 4 ಬಾಕಿ ಇದ್ದು 3 ವ್ಯಾಜ್ಯದಲ್ಲಿವೆ. ಬೀದರ್ - 5 ಬಾಕಿ ಇದ್ದು, ಕೂಡಲೇ ಪ್ರಾರಂಭಿಸಿ ಪೂರ್ಣಗೊಳಿಸಲು ತಿಳಿಸಲಾಯಿತು. ರಾಯಚೂರ-12, ಯಾದಗಿರಿ – 2, ಗುಲ್ಬರ್ಗ – 16, ಕೊಪ್ಪಳ – 8, ರಾಯಚೂರ - 10 ನಿವೇಶನ ಕೊರತೆ ಇದ್ದುದರಿಂದ, ಕೂಡಲೇ ನಿವೇಶನ ಪಡೆದು ಕಾಮಗಾರಿ ಪ್ರಾರಂಭಿಸಲು ಸೂಚಿಸಲಾಯಿತು.

**2010–11ನೇ ಸಾಲಿನ ಹೆಚ್ಚುವರಿ ಕೊಠಡಿಗಳ ನಿರ್ಮಾಣ:**

ಕೊಪ್ಪಳ–16 ರಲ್ಲಿ 6 ಕಾಮಗಾರಿಗಳನ್ನು ಪ್ರಾರಂಭಿಸಿದ್ದು, ಉಳಿದವುಗಳನ್ನು ಕೂಡಲೇ ಪ್ರಾರಂಭಿಸಲಾಗುವುದೆಂದು ತಿಳಿಸಿದರು. ರಾಯಚೂರ – 333ರಲ್ಲಿ 76 ಕಾಮಗಾರಿಗಳನ್ನು ಪ್ರಾರಂಭಿಸಲಾಗಿದ್ದು, ಉಳಿದವುಗಳಲ್ಲಿ ಮಣ್ಣಿನ ಗುಣ ಪರೀಕ್ಷೆ ಮಾಡುವುದು ಹಾಗೂ ನಿವೇಶನ ಲಭ್ಯತೆಯ ಸಮಸ್ಯೆಯಿಂದಾಗಿ ಪ್ರಾರಂಭಿಸಲಾಗಿಲ್ಲ ಹಾಗೂ ಸಮಸ್ಯೆ ಬಗೆಹರಿಸಿಕೊಂಡು ಕೂಡಲೇ ಪ್ರಾರಂಬಿಸಲಾಗುವುದೆಂದು ತಿಳಿಸಿದರು. ಯಾದಗಿರಿ – 166 ಪ್ರಗತಿಯಲ್ಲಿವೆ, ಡಿಸೆಂಬರ್–2011ರೊಳಗೆ ಪೂರ್ಣಗೊಳಿಸಲಾಗುವುದು.ಗುಲ್ಬರ್ಗ – 191, ಬಳ್ಳಾರಿ – 35, ಈಗಾಗಲೇ ವಿವಿಧ ಹಂತದಲ್ಲಿರುವ ಕಾಮಗಾರಿಗಳನ್ನು ಡಿಸೆಂಬರ್ ಅಂತ್ಯದೊಳಗೆ ಪೂರ್ಣಗೊಳಿಸಲು ಹಾಗೂ ಇದುವರೆಗೂ ಪ್ರಾರಂಭಿಸದ ಕಾಮಗಾರಿಗಳನ್ನು ಕೂಡಲೇ ಪ್ರಾರಂಭಿಸುವಂತೆ ತಿಳಿಸಲಾಯಿತು.

**ಯೋಜನಾ ವಿಭಾಗದ ಪ್ರಗತಿ ಪರಿಶೀಲನೆ:**

2011–12ನೇ ಸಾಲಿಗೆ ಪ್ರಾಥಮಿಕ ಶಾಲೆಗಳಲ್ಲಿ ಕುಡಿಯುವ ನೀರು ಹಾಗೂ ಶೌಚಾಲಯ ಪರಿಶೀಲನೆಯನ್ನು ನಡೆಸಲಾಯಿತು. ಕಡ್ಡಾಯ ಶಿಕ್ಷಣ ಯೋಜನೆಯ ಅನ್ವಯ ಶಾಲೆಗಳಲ್ಲಿ ಕುಡಿಯುವ ನೀರು ಹಾಗೂ ಶೌಚಾಲಯಗಳನ್ನು ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ಒದಗಿಸಬೇಕಿದ್ದು, ಪ್ರಗತಿ ಹಂತದ ಬಗ್ಗೆ ಪರಿಶೀಲನೆ ನಡೆಸಲಾಯಿತು. ಸುಪ್ರೀಂ ಕೋರ್ಟ್‌ಗೆ ನೀಡಿದ ಅಂಕಿಅಂಶಗಳು ಹಾಗೂ ಉಚ್ಚ ನ್ಯಾಯಾಲಯಕ್ಕೆ ನೀಡಿದ ಅಂಕಿಅಂಶಗಳಲ್ಲಿ ವ್ಯತ್ಯಾಸಗಳಿದ್ದು ಅವುಗಳನ್ನು ಜಿಲ್ಲಾವಾರು ವಿವರಣೆ ನೀಡಲಾಯಿತು. ಮತ್ತು ಬಾಕಿಯುಳಿದ ಜಿಲ್ಲೆಗಳ ಉಪ ನಿರ್ದೇಶಕರಿಗೆ ಕಾಮಗಾರಿಗಳನ್ನು ನವೆಂಬರ್ ಮತ್ತು ಡಿಸೆಂಬರ್ ಅಂತ್ಯಕ್ಕೆ ಇತ್ಯರ್ಥ ಪಡಿಸಿ ವರದಿ ನೀಡಲು ಹಾಗೂ ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಂದ ಕಾಮಗಾರಿ ಮುಕ್ತಾಯಗೊಂಡಿರುವ ಬಗ್ಗೆ ಧೃಡೀಕರಣವನ್ನು ಪಡೆದು ನೀಡಬೇಕೆಂದು ಸೂಚನೆಯನ್ನು ನೀಡಲಾಯಿತು. ಸುಪ್ರೀಂ ಕೋರ್ಟ್‌ನಲ್ಲಿ ವರ್ಷಾಂತ್ಯದೊಳಗೆ ಮುಗಿಸುವುದಾಗಿ ಅಫಿಡೆವಿಟ್ ಸಲ್ಲಿಸಿರುವುದರಿಂದ ಇದನ್ನು ಕಡ್ಡಾಯವಾಗಿ ಮಾಡತಕ್ಕದ್ದು ಎಂದು ಸೂಚಿಸಲಾಯಿತು.

ಅದರಂತೆಯೇ, ಪ್ರೌಢಶಾಲಾ ವಿಭಾಗಗಳಿಗೆ ನೀಡಲಾದ ಕುಡಿಯುವ ನೀರು ಹಾಗೂ ಶೌಚಾಲಯ ಕಾಮಗಾರಿ ನಿರ್ಮಾಣದ ಕಾಮಗಾರಿಯ ಪ್ರಗತಿ ಪರಿಶೀಲನೆಯನ್ನು ನಡೆಸಲಾಯಿತು. ಕಾಮಗಾರಿ ಮುಕ್ತಾಯಗೊಳಿಸಿದ ನಂತರ ಅನುದಾನ ಬಳಕೆಯಾದ ಬಗ್ಗೆ ಉಪಯೋಗತಾ ಪ್ರಮಾಣಪತ್ರಗಳನ್ನು ತುರ್ತಾಗಿ ಸಲ್ಲಿಸಲು ಸೂಚನೆ ನೀಡಲಾಯಿತು.

---

ಪ್ರಾಥಮಿಕ ಶಾಲಾ ಕುಡಿಯುವ ನೀರು **2011–12** [**ಆರ್ಥಿಕ ಮತ್ತು ಭೌತಿಕ ಪ್ರಗತಿ**]

| ಕ್ರ ಸಂ) | ಜಿಲ್ಲೆಯ ಹೆಸರು | ಸ.ಶಿ.ಅ. | ಪ್ರಗತಿ | ಜಿ.ಪಂ. | ಪ್ರಗತಿ | ಸರ್ಕಾರ ಗುರಿ | ಪ್ರಗತಿ | ಒಟ್ಟು ಗುರಿ | ಒಟ್ಟು ಪ್ರಗತಿ | ಸುಪ್ರೀಂ ಕೋರ್ಟ್‌ಗೆ ನೀಡಿರುವ ಗುರಿ | ಪ್ರಗತಿ | ಉಳಿಕೆ |
|---|---|---|---|---|---|---|---|---|---|---|---|---|
| 1 | ಬೆಳಗಾಂ | 2 | 2 | 404 | 32 | 55 | 5 | 461 | 39 | 208 | 169 | 39 |
| 2 | ಚಿಕ್ಕೋಡಿ | 0 | 0 | 264 | 229 | 0 | 0 | 264 | 229 | 264 | 87 | 177 |
| 3 | ಧಾರವಾಢ | 0 | 0 | 0 | 0 | 0 | 0 | 0 | 0 | 1 | 1 | 0 |
| 4 | ಗದಗ | 0 | 0 | 42 | 32 | 5 | 5 | 47 | 37 | 0 | 0 | 0 |
| 5 | ಹಾವೇರಿ | 0 | 0 | 112 | 112 | 5 | 5 | 117 | 117 | 0 | 0 | 0 |
| 6 | ಬಿಜಾಪುರ | 368 | 368 | 204 | 204 | 0 | 0 | 572 | 572 | 708 | 708 | 0 |
| 7 | ಬಾಗಲಕೋಟೆ | 0 | 0 | 38 | 32 | 0 | 4 | 38 | 36 | 45 | 45 | 0 |

| | | | | | | | | | | | | |
|---|---|---|---|---|---|---|---|---|---|---|---|---|
| 8 | ಉತ್ತರಕನ್ನಡ | 66 | 66 | 131 | 131 | 5 | 5 | 202 | 202 | 149 | 149 | 0 |
| 9 | ಸಿರ್ಸಿ | 74 | 74 | 3 | 3 | 0 | 0 | 77 | 77 | 0 | 0 | 0 |
| 10 | ಬೀದರ್ | 1 | 1 | 414 | 217 | 7 | 0 | 422 | 221 | 592 | 221 | 371 |
| 11 | ಕೊಪ್ಪಳ | 19 | 19 | 150 | 53 | 12 | 12 | 181 | 84 | 124 | 134 | 0 |
| 12 | ಬಳ್ಳಾರಿ | 41 | 41 | 56 | 56 | 0 | 0 | 97 | 97 | 269 | 269 | 0 |
| 13 | ರಾಯಚೂರು | 0 | 0 | 493 | 483 | 6 | 1 | 499 | 484 | 328 | 328 | 0 |
| 14 | ಗುಲ್ಬರ್ಗಾ | 107 | 0 | 462 | 462 | 8 | 4 | 577 | 464 | 334 | 334 | 0 |
| 15 | ಯಾದಗಿರಿ | 15 | 15 | 280 | 254 | 5 | 5 | 300 | 254 | 391 | 391 | 37 |
| | ಒಟ್ಟು | 693 | 586 | 3053 | 2300 | 108 | 46 | 3854 | 2913 | 3413 | 2836 | 624 |

ಪ್ರೌಢಶಾಲಾ ಕುಡಿಯುವ ನೀರು **2011–12** [ಆರ್ಥಿಕ ಮತ್ತು ಭೌತಿಕ ಪ್ರಗತಿ]

| ಕ್ರ.ಸಂ | ಜಿಲ್ಲೆಯ ಹೆಸರು | RMSA ಗುರಿ | ಪ್ರಗತಿ | ಜಿ.ಪಂ.ಗುರಿ | ಪ್ರಗತಿ | ಸರ್ಕಾರ ಗುರಿ | ಪ್ರಗತಿ | ಒಟ್ಟು ಗುರಿ | ಒಟ್ಟು ಪ್ರಗತಿ | ಹೈಕೋರ್ಟ್‌ಗೆ ನೀಡಿರುವ ಗುರಿ | ಪ್ರಗತಿ | ಉಳಿಕೆ |
|---|---|---|---|---|---|---|---|---|---|---|---|---|
| 1 | ಬೆಳಗಾಂ | **2** | 2 | **166** | 166 | 38 | 38 | 206 | 206 | 206 | 205 | 1 |
| 2 | ಚಿಕ್ಕೋಡಿ | **0** | 0 | **27** | 27 | 0 | 0 | 27 | 27 | 0 | 0 | 0 |
| 3 | ಧಾರವಾಢ | **0** | 0 | **0** | 0 | 3 | 3 | 3 | 3 | 0 | 0 | 0 |
| 4 | ಗದಗ | **0** | 0 | **0** | 0 | 0 | 0 | 0 | 3 | 0 | 0 | 0 |
| 5 | ಹಾವೇರಿ | **5** | 5 | **12** | 12 | 6 | 6 | 23 | 23 | 0 | 0 | 0 |
| 6 | ಬಿಜಾಪುರ | **2** | 2 | **72** | 72 | 39 | 0 | 113 | 74 | 13 | 0 | 39 |
| 7 | ಬಾಗಲಕೋಟೆ | **0** | 0 | **28** | 28 | 5 | 5 | 33 | 33 | 33 | 33 | 0 |
| 8 | ಉತ್ತರಕನ್ನಡ | **0** | 0 | **0** | 0 | 0 | 0 | 0 | 0 | 0 | 0 | 0 |
| 9 | ಸಿರ್ಸಿ | **0** | 0 | **1** | 1 | 9 | 9 | 10 | 10 | 0 | 0 | 0 |
| 10 | ಬೀದರ್ | **0** | 0 | **16** | 0 | 5 | 3 | 21 | 3 | 21 | 3 | 18 |
| 11 | ಕೊಪ್ಪಳ | **1** | 0 | **62** | 6 | 21 | 21 | 84 | 27 | 84 | 84 | 0 |
| 12 | ಬಳ್ಳಾರಿ | **0** | 0 | **30** | 0 | 41 | 40 | 71 | 40 | 71 | 50 | 21 |
| 13 | ರಾಯಚೂರು | **0** | 0 | **75** | 0 | 15 | 1 | 90 | 1 | 90 | 90 | 0 |
| 14 | ಗುಲ್ಬರ್ಗಾ | **45** | 0 | **97** | 0 | 44 | 0 | 186 | 0 | 186 | 186 | 0 |
| 15 | ಯಾದಗಿರಿ | **29** | 0 | **5** | 0 | 4 | 0 | 38 | 0 | 0 | 32 | 06 |
| | ಒಟ್ಟು | **84** | 9 | **591** | 312 | 230 | 126 | 905 | 450 | 704 | 722 | 85 |

ಪ್ರಾಥಮಿಕ ಶೌಚಾಲಯ **2011–12 [ಆರ್ಥಿಕ ಮತ್ತು ಭೌತಿಕ ಪ್ರಗತಿ]**

| ಕ್ರ.ಸಂ) | ಜಿಲ್ಲೆಯ ಹೆಸರು | ಸ.ಶಿ.ಅ. ಗುರಿ | ಪ್ರಗತಿ | ಜಿ.ಪಂ .ಗುರಿ | ಪ್ರಗತಿ | ಸರ್ಕಾರ ಗುರಿ | ಪ್ರಗತಿ | ಒಟ್ಟು ಗುರಿ | ಒಟ್ಟು ಪ್ರಗತಿ | ಸುಪ್ರಿಂ ಕೋರ್ಟ್ ಗೆ ನೀಡಿರುವ ಗುರಿ | ಸಾಧನೆ | ಉಳಿಕೆ |
|---|---|---|---|---|---|---|---|---|---|---|---|---|
| 1 | ಬೆಳಗಾಂ | 42 | 42 | 104 | 104 | 99 | 0 | 245 | 104 | 1808 | 1796 | 12 |
| 2 | ಚಿಕ್ಕೋಡಿ | 0 | 0 | 289 | 289 | 102 | 102 | 391 | 102 | 0 | 0 | 7 |
| 3 | ಧಾರವಾಢ | 24 | 24 | 0 | 0 | 20 | 20 | 44 | 44 | 116 | 116 | 0 |
| 4 | ಗದಗ | 33 | 30 | 41 | 31 | 43 | 30 | 117 | 61 | 250 | 225 | 25 |
| 5 | ಹಾವೇರಿ | 0 | 0 | 73 | 73 | 100 | 100 | 173 | 173 | 85 | 85 | 0 |
| 6 | ಬಿಜಾಪುರ | 871 | 851 | 444 | 29 | 0 | 0 | 1315 | 880 | 1456 | 1102 | 354 |
| 7 | ಬಾಗಲಕೋಟೆ | 6 | 14 | 108 | 1 | 95 | 0 | 209 | 15 | 639 | 614 | 25 |
| 8 | ಉತ್ತರಕನ್ನಡ | 293 | 185 | 108 | 63 | 0 | 0 | 401 | 248 | 882 | 826 | 56 |
| 9 | ಸಿರ್ಸಿ | 267 | 201 | 96 | 1 | 4 | 4 | 367 | 20 | 0 | 0 | 13 |
| 10 | ಬೀದರ್ | 122 | 122 | 736 | 736 | 0 | 0 | 858 | 858 | 849 | 34 | 815 |
| 11 | ಕೊಪ್ಪಳ | 443 | 443 | 189 | 189 | 8 | 8 | 640 | 640 | 640 | 150 | 490 |
| 12 | ಬಳ್ಳಾರಿ | 93 | 66 | 363 | 0 | 0 | 0 | 456 | 404 | 848 | 826 | 22 |
| 13 | ರಾಯಚೂರು | 0 | 0 | 374 | 0 | 0 | 0 | 374 | 238 | 857 | 857 | 0 |
| 14 | ಗುಲ್ಬರ್ಗಾ | 216 | 216 | 321 | 0 | 65 | 65 | 602 | 602 | 1182 | 1110 | 72 |
| 15 | ಯಾದಗಿರಿ | 582 | 582 | 297 | 297 | 0 | 0 | 879 | 879 | 583 | 506 | 77 |
| | | 2992 | 2776 | 3543 | 1813 | 536 | 329 | 7071 | 5268 | 10195 | 8247 | 1948 |

ಪ್ರೌಢ ಶೌಚಾಲಯ **2011–12 [ಆರ್ಥಿಕ ಮತ್ತು ಭೌತಿಕ ಪ್ರಗತಿ]**

| ಕ್ರ.ಸಂ) | **ಜಿಲ್ಲೆ** | ಆರ್.ಎಂ.ಎಸ್.ಎ ಗುರಿ | **ಪ್ರಗತಿ** | **ಜಿ.ಪಂ ಗುರಿ** | **ಪ್ರಗತಿ** | **ಸರ್ಕಾರ ಗುರಿ** | **ಪ್ರಗತಿ** | **ಒಟ್ಟು ಗುರಿ** | ಒಟ್ಟು ಪ್ರಗತಿ | ಸುಪ್ರಿಂ ಕೋರ್ಟ್ ಗೆ ನೀಡಿರುವ ಗುರಿ | ಸಾಧನೆ | ಉಳಿಕೆ |
|---|---|---|---|---|---|---|---|---|---|---|---|---|
| 1 | ಬೆಳಗಾಂ | **13** | 0 | 3 | 0 | **114** | 0 | **130** | **0** | **130** | 123 | 7 |
| 2 | ಚಿಕ್ಕೋಡಿ | **0** | 0 | 65 | 0 | **0** | 0 | **65** | **0** | **0** | 0 | 15 |
| 3 | ಧಾರವಾಢ | **0** | 0 | 0 | 0 | **45** | 0 | **45** | **0** | **45** | 45 | 0 |
| 4 | ಗದಗ | **0** | 0 | 4 | 3 | **32** | 26 | **36** | **29** | **36** | 29 | 7 |
| 5 | ಹಾವೇರಿ | **11** | 11 | 28 | 28 | **19** | 19 | **58** | **58** | **46** | 30 | 16 |
| 6 | ಬಿಜಾಪುರ | **4** | 4 | 145 | 0 | **75** | 0 | **224** | **0** | **52** | 0 | 52 |
| 7 | ಬಾಗಲಕೋಟೆ | **0** | 0 | 4 | 3 | **62** | 0 | **66** | **3** | **66** | 62 | 4 |
| 8 | ಉತ್ತರಕನ್ನಡ | **0** | 0 | 22 | 22 | **21** | 21 | **43** | **43** | **43** | 35 | 8 |
| 9 | ಸಿರ್ಸಿ | **1** | 0 | 6 | 0 | **45** | 0 | **52** | **0** | **0** | 0 | 37 |

| | | | | | | | | | | | |
|---|---|---|---|---|---|---|---|---|---|---|---|
| 10 | ಬೀದರ್ | **0** | 0 | 38 | 38 | **29** | 23 | **67** | **63** | **54** | 48 | 6 |
| 11 | ಕೊಪ್ಪಳ | **6** | 6 | 82 | 82 | **14** | 14 | **102** | **102** | **59** | 50 | 87 |
| 12 | ಬಳ್ಳಾರಿ | **1** | 0 | 73 | 0 | **42** | 26 | **116** | **26** | **116** | 39 | 77 |
| 13 | ರಾಯಚೂರು | **0** | 0 | 49 | 0 | **29** | 0 | **78** | **10** | **78** | 78 | 0 |
| 14 | ಗುಲ್ಬರ್ಗಾ | **71** | 0 | 51 | 0 | **43** | 0 | **165** | **0** | **129** | 107 | 22 |
| 15 | ಯಾದಗಿರಿ | **30** | 0 | 68 | 0 | **22** | 0 | **120** | **0** | **50** | 47 | 3 |
| | | **137** | 21 | 638 | 176 | **592** | **129** | 1367 | 334 | 904 | 693 | 341 |

ಕುಡಿಯುವ ನೀರು ಪ್ರಾಥಮಿಕ ಮತ್ತು ಪ್ರೌಢ ನ್ಯಾಯಾಲಯದ ಆದೇಶದಂತೆ ಅಕ್ಟೋಬರ್ 31ರೊಳಗೆ ಪೂರ್ಣಗೊಳಿಸಬೇಕು, ಶೌಚಾಲಯ ನಿರ್ಮಾಣವನ್ನು 30.11.2011ರೊಳಗೆ ಪೂರ್ಣಗೊಳಿಸಬೇಕು. ಅಪೂರ್ಣಗೊಂಡ ಕಾಮಗಾರಿಗಳನ್ನು ದಿ: 31.12.2011ರೊಳಗೆ ಕಡ್ಡಾಯವಾಗಿ ಪೂರ್ಣಗೊಳಿಸಿ ಸಂಬಂಧಿಸಿದ ಜಿಲ್ಲಾಧಿಕಾರಿಗಳಿಂದ ಉಪಯೋಗತಾ ಪ್ರಮಾಣಪತ್ರಗಳನ್ನು ನವೆಂಬರ್ 30ಕ್ಕೆ ಎಲ್ಲರೂ ನೀಡಬೇಕು ಎಂದು ತಿಳಿಸಿದರು.

**ರಾಜೀವಗಾಂಧಿ ವಸತಿ ನಿಗಮ ನಿಯಮಿತ ಇವರ ವತಿಯಿಂದ 2007-08 ರಿಂದ 2010-11ನೇ ಸಾಲಿನ ವಿಶೇಷ ಅಭಿವೃದ್ಧಿ ಯೋಜನೆಯಡಿ ಶಿಕ್ಷಕರ ವಸತಿ ಗೃಹಗಳ ನಿರ್ಮಾಣ ಕುರಿತು ಜಿಲ್ಲಾವಾರು ನಿರ್ಮಿತಿ ಕೇಂದ್ರದ ಇಂಜಿನಿಯರ್‌ಗಳ ಸಮ್ಮುಖದಲ್ಲಿ ಪ್ರಗತಿ ವರದಿ ಪರಿಶೀಲಿಸಲಾಯಿತು:**

**ಬೆಳಗಾಂವ ವಿಭಾಗ :**

ಹಂತ-1 : ರಲ್ಲಿ

✓ ಬಾಗಲಕೋಟ ಜಿಲ್ಲೆಯ ಕುಂದರಗಿಯಲ್ಲಿ ಶಿಕ್ಷಕರ ವಸತಿ ಗೃಹ ಕಾಮಗಾರಿಯನ್ನು ನಿರ್ಮಿತಿ ಕೇಂದ್ರದ ವತಿಯಿಂದ ಪ್ರಾರಂಭಿಸಲಾಗಿದ್ದು, ಮಾರ್ಚ-2012ರ ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದೆಂದು ನಿರ್ಮಿತಿ ಕೇಂದ್ರದ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದರು.

✓ ಬ್ಯಾಡಗಿಯಲ್ಲಿ ಪುನರ್ವಸತಿ ಕೇಂದ್ರದಲ್ಲಿ ಶಿಕ್ಷಕರ ವಸತಿ ಗೃಹ ಕಾಮಗಾರಿ ಲಿಂಟಲ್‌ವರೆಗೆ ಮುಗಿದಿದ್ದು, 2012 ಫೆಬ್ರವರಿ ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದು ಎಂದು ತಿಳಿಸಲಾಗಿ, ವಿದ್ಯುತ್ ಸಂಪರ್ಕವನ್ನು ಕಲ್ಪಿಸುವ ಕುರಿತು ಸಂಬಂಧಿಸಿದ ವಿದ್ಯುತ್ ನಿಗಮ ಕಛೇರಿಯನ್ನು ಸಂಪರ್ಕಿಸಿ ಪೂರ್ಣಗೊಳಿಸುವಂತೆ ತಿಳಿಸಲಾಯಿತು.

✓ ರಾಯಭಾಗ್ ನಂದಿಕುರ್ಲಿ, ಮೊತರಬ, ಮೊಗಲಕೋಡ ಶಿಕ್ಷಕರ ವಸತಿ ಗೃಹಗಳನ್ನು ಹಸ್ತಾಂತರಿಸಲಾಗಿದ್ದು, ಶಿಕ್ಷಕರು ವಾಸಿಸುತ್ತಿಲ್ಲ ಎಂದು ತಿಳಿಸಲಾಗಿ, ಅಂತಹ ಶಿಕ್ಷಕರ ವೇತನದಲ್ಲಿ ಬಾಡಿಗೆ ಹಣವನ್ನು ಕಟಾಯಿಸುವಂತೆ ಅಥವಾ ಸದರಿ ಶಿಕ್ಷಕರಿಗೆ 3 ತಿಂಗಳ ಗಡುವು ನೀಡಿ, ಅಮಾನತ್ತುಗೊಳಿಸಲು ತಿಳಿಸಲಾಯಿತು.

✓ ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಯರಗಟ್ಟಿಯು ನಗರದಿಂದ 2ಕಿ.ಮೀ. ದೂರವಿರುವ ಕಾರಣ ನೀರಿನ ಹಾಗೂ ವಿದ್ಯುತ್ ಸಮಸ್ಯೆಯಿದೆ ಎಂದು ಹಾಗೂ ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನ ಸಂಗಮೇಶ್ವರದಲ್ಲಿ ಕಟ್ಟಡ ಪೂರ್ಣಗೊಂಡಿದ್ದು, ನೀರಿನ ಲಭ್ಯತೆ ಇಲ್ಲವೆಂದು ಸಂಬಂಧಪಟ್ಟ ಉಪನಿರ್ದೇಶಕರು ಸಭೆಯಲ್ಲಿ ತಿಳಿಸಿದಾಗ, ನೀರಿನ ವ್ಯವಸ್ಥೆ ಮಾಡುವ ಕುರಿತು ಟಿ.ಬಿ.ಎಫ್.ನಿಂದ ಯರಗಟ್ಟಿಗೆ ರೂ.1.00ಲಕ್ಷ ಹಾಗೂ ಸಂಗಮೇಶ್ವರಕ್ಕೆ ರೂ. 75,000-00ಗಳಷ್ಟು ಹಣ ಬಿಡುಗಡೆಗೊಳಿಸುವಂತೆ ಆಯುಕ್ತರು, ಬೆಂಗಳೂರು, ಇವರು ಟಿ.ಬಿ.ಎಫ್. ಉಪನಿರ್ದೇಶಕರಿಗೆ ತಿಳಿಸಿದರು.

(ಕ್ರಮ: ಉಪನಿರ್ದೇಶಕರು, ಟಿ.ಬಿ.ಎಫ್., ಬೆಂಗಳೂರು)

- ✓ ಬೆಳಗಾವಿ ವಿಭಾಗದ 4ನೇ ಹಂತದ ಬೆಳಗಾವಿ ಜಿಲ್ಲೆಯ ಬೈಲಹೊಂಗಲ ರಾಮದುರ್ಗ ನಿವೇಶನ ಹಸ್ತಾಂತರವಾಗಿದ್ದು, ಕೂಡಲೇ ಕಾಮಗಾರಿ ಪ್ರಾರಂಭಿಸಲು ಆಯುಕ್ತರು ತಿಳಿಸಿದರು.
- ✓ ಹಂತ–3 ಬೆಳಗಾವಿ ಜಿಲ್ಲೆ ಗೋಕಾಕ್ ಖನಗಾಂವ್, ಅಥಣಿ ತಾಲ್ಲೂಕು ಮಧಭಾವಿ ಪ್ರಸ್ತುತವಾಗಿ ಜಾಗ ಹಸ್ತಾಂತರಿಸಿದ್ದು, ಕಾಮಗಾರಿ ಪ್ರಾರಂಭಿಸುವುದಾಗಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ರವರು ತಿಳಿಸಿದರು.

- ✓ ದೂಪದಾಳದಲ್ಲಿ ವಿದ್ಯುತ್ ಸಮಸ್ಯೆ ಇದೆ ಎನ್ನಲಾಗಿ, ಈ ಬಗ್ಗೆ ಉಪನಿರ್ದೇಶಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಸಂಬಂಧಿಸಿದ ಅಪರ ಆಯುಕ್ತರು ಹೆಸ್ಕಾಂ ಕಛೇರಿಯೊಂದಿಗೆ ಸಂಪರ್ಕಿಸಿ ವಿದ್ಯುತ್ ಸಂಪರ್ಕ ಕಲ್ಪಿಸಿಕೊಳ್ಳುವಂತೆ ತಿಳಿಸಲಾಯಿತು.
- ✓ ಹಂತ–2 ರಲ್ಲಿ ಬಾಗಲಕೋಟ ಜಿಲ್ಲೆಯ ಬೀಳಗಿಯಲ್ಲಿ ಜಾಗ ಸಿಗದ ಕಾರಣ ಅರಿಕೇರಿಗೆ ಸ್ಥಳಾಂತರಿಸಿ, ಕಾಮಗಾರಿ ಪ್ರಾರಂಭಿಸಲಾಗಿದ್ದು, 2012–ಮಾರ್ಚ ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದು.
- ✓ ಹಂತ–3 ರಲ್ಲಿ ಬಾಗಲಕೋಟ ಜಿಲ್ಲೆಯ ಹುನಗುಂದದಲ್ಲಿ ಸದ್ಯ ಜಾಗದ ಸಮಸ್ಯೆ ಬಗೆಹರಿದಿದ್ದು ಕೂಡಲೇ ಪ್ರಾರಂಭಿಸಿ ಮೇ–2012ರ ಅಂತ್ಯದೊಳಗೆ ಮುಗಿಸಲಾಗುವುದು.
- ✓ ಒಟ್ಟಿನಲ್ಲಿ ವಿವಿಧ ಹಂತಗಳಲ್ಲಿ ವಸತಿ ಗೃಹಗಳ ಕಾಮಗಾರಿಗಳು ಪೂರ್ಣಗೊಂಡಿದ್ದರೂ ವಿದ್ಯುತ್, ನೀರು ಪೂರೈಕೆಯ ಸಮಸ್ಯೆಯಿಂದ ಹಸ್ತಾಂತರಿಸದಿರುವುದು ಸಭೆಯ ಗಮನಕ್ಕೆ ಬಂದಿದ್ದು, ಈ ಕುರಿತು ಸಂಬಂಧಿಸಿದ ಎಲ್ಲ ಅಧಿಕಾರಿಗಳು ಸಂಬಂಧಿಸಿದ ವಿದ್ಯುತ್ ನಿಗಮ ಕಛೇರಿಯನ್ನು ಸಂಪರ್ಕಿಸುವುದು. ಹಾಗೂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ರಾಜೀವಗಾಂಧಿ ವಸತಿ ನಿಗಮ ನಿಯಮಿತ, ಇವರು ಸ್ಥಳದಲ್ಲಿಯೇ ಇದ್ದು, 10 ದಿನಗಳೊಳಗೆ ಸಮಸ್ಯೆ ಬಗೆಹರಿಸುವಂತೆ ತಿಳಿಸಲಾಯಿತು.
- ✓ ಜಾಗದ ಸಮಸ್ಯೆ ಇರುವೆಡೆ ಕೂಡಲೇ ಸಮಸ್ಯೆ ಬಗೆಹರಿಸಿಕೊಂಡು ಮಾರ್ಚ ಅಂತ್ಯದೊಳಗೆ ಪೂರ್ಣಗೊಳಿಸುವುದು. ಅದರಂತೆ ಅಪೂರ್ಣಗೊಂಡ ಕಾಮಗಾರಿಗಳನ್ನು ಡಿಸೆಂಬರ್ ಅಂತ್ಯದೊಳಗೆ ಪೂರ್ಣಗೊಳಿಸುವಂತೆ ತಿಳಿಸಲಾಯಿತು. ಮತ್ತು ಪೂರ್ಣಗೊಂಡ ಕಟ್ಟಡಗಳನ್ನು ಶಿಕ್ಷಕರಿಗೆ ಕೂಡಲೇ ಹಂಚಿಕೆ ಮಾಡುವುದು ಇಲ್ಲದಿದ್ದಲ್ಲಿ ಸಂಬಂಧಿಸಿದ ಅಧಿಕಾರಿಗಳೇ ಜವಾಬ್ದಾರರಾಗುತ್ತಾರೆಂದು ತಿಳಿಸಲಾಯಿತು. ಹಂಚಿಕೆ ಮಾಡಿದ್ದರೂ ವಾಸಿಸದ ಶಿಕ್ಷಕರಿಗೆ ಅವರ ವೇತನದಿಂದ ಬಾಡಿಗೆ ಆಕರಿಸುವುದು ಹಾಗೂ ಸದರಿ ಶಿಕ್ಷಕರಿಗೆ ಒಂದು ತಿಂಗಳ ಗಡುವು ನೀಡಿ, ಎರಡು ತಿಂಗಳವರೆಗೆ ಭೇಟಿ ನೀಡಿ ವಾಸಿಸದಿರುವುದನ್ನು ಖಚಿತಪಡಿಸಿಕೊಂಡು ಅಮಾನತ್ತುಗೊಳಿಸಲು ತಿಳಿಸಲಾಯಿತು.
- ✓ ಬಿಜಾಪುರ ಜಿಲ್ಲೆ ಬಸವನ ಬಾಗೇವಾಡಿ ತಾಲ್ಲೂಕು, ಮನಗೋಳಿ, ಮುಳವಾಡ ಮತ್ತು ಗೋಳಸಂಗಿ ಶಿಕ್ಷಕರ ವಸತಿ ಗೃಹಗಳನ್ನು ಇಲಾಖೆಗೆ ಹಸ್ತಾಂತರಿಸಲಾಗಿದೆ.
- ✓ ಇಂಡಿ ತಾಲ್ಲೂಕು ತಾಂಬಾ, ಅಥರ್ಗಾ ಮತ್ತು ತಡವಲಗಾದಲ್ಲಿ ಅಂತಿಮ ಹಂತದಲ್ಲಿದ್ದು, ತಾಂಬಾ ಮತ್ತು ಅಥರ್ಗಾ ಇಲಾಖೆಗೆ ಹಸ್ತಾಂತರಿಸಲಾಗಿದ್ದು, ಉಳಿದ ತಡವಲಗಾ ಶಿಕ್ಷಕರ ವಸತಿ ಗೃಹವನ್ನು ಆರು ತಿಂಗಳೊಳಗೆ ಪೂರ್ಣಗೊಳಿಸಿ ಹಸ್ತಾಂತರಿಸುವುದಾಗಿ ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತದವರು ತಿಳಿಸಿದರು.

- ✓ ಬಿಜಾಪುರ ಜಿಲ್ಲೆ ಇಂಡಿ ತಾಲ್ಲೂಕು, ರೇವಣಗಾಂವನಲ್ಲಿ ಶಿಕ್ಷಕರ ವಸತಿ ಗೃಹಕ್ಕೆ ನಿವೇಶನ ಲಭ್ಯವಿರುವುದಿಲ್ಲ. ಇದನ್ನು ಕೂಡಲೇ ಗುರುತಿಸಿ ಹಸ್ತಾಂತರಿಸಲು ಉಪನಿರ್ದೇಶಕರಿಗೆ ಮಾನ್ಯ ಆಯುಕ್ತರು ಸೂಚಿಸಿದರು.
- ✓ ಬಿಜಾಪುರ ಜಿಲ್ಲೆ ಸಿಂಧಗಿಯಲ್ಲಿ ಪ್ರಸ್ತುತ ಜಾಗ ಹಸ್ತಾಂತರವಾಗಿದ್ದು, ಕಾಮಗಾರಿ ಪ್ರಾರಂಭವಾಗಿರುವುದಾಗಿ ತಿಳಿಸಿದರು.
- ✓ ಬಿಜಾಪುರ ಗ್ರಾಮೀಣ, ಹುಬನೂರು ಮತ್ತು ಗೋಣಸಗಿ ನಿವೇಶನ ಸಮಸ್ಯೆ ಇದ್ದು, ಗುರುತಿಸಲು ಕೂಡಲೇ ಈ ಬಗ್ಗೆ ಗಮನಹರಿಸಿ ಹಸ್ತಾಂತರಿಸುವಂತೆ ಉಪನಿರ್ದೇಶಕರಿಗೆ ಆಯುಕ್ತರು ಸೂಚಿಸಿದರು.
- ✓ ಹಂತ–3 ಬಿಜಾಪುರ ಜಿಲ್ಲೆ ಮುದ್ದೇಬಿಹಾಳ ನಿವೇಶನ ಲಭ್ಯವಿರುವುದಿಲ್ಲ. ಕೂಡಲೇ ಉಪನಿರ್ದೇಶಕರು, ನಿವೇಶನವನ್ನು ಗುರುತಿಸಿ ಹಸ್ತಾಂತರಿಸಲು ತಿಳಿಸಿದೆ.
- ✓ ಹಾವೇರಿ ಜಿಲ್ಲೆ ಸವಣೂರು ತಾಲ್ಲೂಕು, ಹತ್ತಿಮತ್ತೂರು, ಕಡಗೋಳ ಶಿಕ್ಷಕರ ವಸತಿ ಗೃಹಗಳು 2011 ಡಿಸೆಂಬರ್ ಅಂತ್ಯಕ್ಕೆ ಇಲಾಖೆಗೆ ಹಸ್ತಾಂತರಿಸುವುದಾಗಿ ನಿರ್ಮಿತಿ ಕೇಂದ್ರದ ಇಂಜಿನಿಯರ್ ರವರು ತಿಳಿಸಿದರು.
- ✓ ಹಾವೇರಿ ಜಿಲ್ಲೆ, ಕರ್ಜಗಿ ಹಾಗೂ ಕನವಳ್ಳಿ ಶಿಕ್ಷಕರ ವಸತಿ ಗೃಹಗಳು ಪೂರ್ಣಗೊಂಡಿದ್ದು, ಸಣ್ಣಪುಟ್ಟ ದುರಸ್ತಿಯೊಂದಿಗೆ ದಿ: 31.12.2011ರೊಳಗೆ ಹಸ್ತಾಂತರಿಸುವುದಾಗಿ ನಿರ್ಮಿತಿ ಕೇಂದ್ರದ ಇಂಜಿನಿಯರ್ ಹಾಗೂ ರಾಜೀವ್ ಗಾಂಧಿ ವಸತಿ ನಿಗಮದವರು ಸಭೆಗೆ ತಿಳಿಸಿದರು.
- ✓ ಹಾವೇರಿ ತಾಲ್ಲೂಕಿನ ಬ್ಯಾಡಗಿ ತಾಲ್ಲೂಕು, ಚಿಕ್ಕಬಾಸೂರು ಪ್ಲಿಂತ್ ಹಂತದಲ್ಲಿದ್ದು ದಿ: 31.05.2012ರೊಳಗೆ ಪೂರ್ಣಗೊಳಿಸುವುದಾಗಿ ಇಂಜಿನಿಯರ್ ರವರು ತಿಳಿಸಿದರು ಮತ್ತು ಹಾನಗಲ್ ತಾಲ್ಲೂಕು, ಉಪ್ಪುಣಸಿ ಶಿಕ್ಷಕರ ವಸತಿ ಗೃಹ ಕಾಮಗಾರಿಯನ್ನು ದಿ: 31.05.2012ರೊಳಗೆ ಪೂರ್ಣಗೊಳಿಸುವುದಾಗಿ ಇಂಜಿನಿಯರ್ ರವರು ತಿಳಿಸಿದರು.
- ✓ ಹಂತ–3, ಹಾವೇರಿ ಜಿಲ್ಲೆ ಶಿಗ್ಗಾಂವ್ ತಾಲ್ಲೂಕು, ಮೇದೂರು ಮತ್ತು ಹಿರೇಕೆರೂರು ತಾಲ್ಲೂಕು ಕೇಣನಕೇರ ಎರಡು ಲಿಂಟಲ್ ಹಂತದಲ್ಲಿದ್ದು, ದಿ: 31.12.2011ರೊಳಗೆ ಪೂರ್ಣಗೊಳಿಸಿ ಹಸ್ತಾಂತರಿಸವುದಾಗಿ ಇಂಜಿನಿಯರ್ ಹಾಗೂ ರಾಜೀವ್ ಗಾಂಧಿ ವಸತಿ ನಿಗಮದವರು ಸಭೆಗೆ ತಿಳಿಸಿದರು.
- ✓ ಚಿಕ್ಕೋಡಿ ತಾಲ್ಲೂಕು, ಹುಕ್ಕೇರಿ ತಾಲ್ಲೂಕಿನ ಪ್ರಾಥಮಿಕ ಶಾಲಾ ಆವರಣ ಕೋಟೆ ಹಾಗೂ ಸಂಕೇಶ್ವರದ ಎರಡು ಶಿಕ್ಷಕರ ವಸತಿ ಗೃಹಗಳ ನಿವೇಶನವನ್ನು ದಿ: 30.11.2011ರೊಳಗೆ ಗುರುತಿಸಿ ಹಸ್ತಾಂತರಿಸಲು ಉಪನಿರ್ದೇಶಕರಿಗೆ ಸೂಚಿಸಲಾಯಿತು.
- ✓ 1ನೇ ಹಂತ:– ಧಾರವಾಡ ಜಿಲ್ಲೆ ನವಲಗುಂದ ತಾಲ್ಲೂಕು, ಶಲವಡಿ, ಮೊರಬ, ನಲವಡಿ, ಕಲಘಟಗಿ ಶಿಕ್ಷಕರ ವಸತಿ ಗೃಹಗಳು ಪೂರ್ಣಗೊಂಡಿದ್ದು ಇಲಾಖೆಗೆ ಹಸ್ತಾಂತರಿಸಲಾಗಿದೆ.
- ✓ ಧಾರವಾಡ ಜಿಲ್ಲೆ ಕುಂದಗೋಳದ ಶಿಕ್ಷಕರ ವಸತಿ ಗೃಹ ಪ್ಲಿಂತ್ ಹಂತದಲ್ಲಿದ್ದು ದಿ: 31.03.2012ರೊಳಗೆ ಪೂರ್ಣಗೊಳಿಸಿ ಹಸ್ತಾಂತರಿಸುವುದಾಗಿ ಇಂಜಿನಿಯರ್ ಹಾಗೂ ರಾಜೀವ್ ಗಾಂಧಿ ವಸತಿ ನಿಗಮದವರು ಸಭೆಗೆ ತಿಳಿಸಿದರು.
- ✓ ಗದಗ ಜಿಲ್ಲೆ ರೋಣ ತಾಲ್ಲೂಕಿನ ಮುಷಿಗೇರಿ ಹಾಗೂ ಶಿರಹಟ್ಟಿ ತಾಲ್ಲೂಕಿನ ಮಾಗಡಿ ಈ ಎರಡು ಶಿಕ್ಷಕರ ವಸತಿ ಗೃಹಗಳು ಪಾಯದ ಹಂತದಲ್ಲಿದ್ದು ಆರು ತಿಂಗಳೊಳಗೆ ಪೂರ್ಣಗೊಳಿಸಿ

ಹಸ್ತಾಂತರಿಸಲು ಸಂಬಂಧಿಸಿದ ಇಂಜಿನಿಯರ್ ಹಾಗೂ ರಾಜೀವ್ ಗಾಂಧಿ ವಸತಿ ನಿಗಮದವರಿಗೆ ಮಾನ್ಯ ಆಯುಕ್ತರು ಸೂಚಿಸಿದರು.

- ✓ ಹಂತ–3, ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕಿನ ಯಕ್ಲಾಸಪುರ ಶಿಕ್ಷಕರ ವಸತಿ ಗೃಹ ನೆಲಮಹಡಿ ಮೇಲ್ಛಾವಣಿ ಹಂತದಲ್ಲಿದ್ದು, ದಿ: 31.03.2012ರೊಳಗೆ ಪೂರ್ಣಗೊಳಿಸಿ ಹಸ್ತಾಂತರಿಸುವುದಾಗಿ ಇಂಜಿನಿಯರ್ ಹಾಗೂ ರಾಜೀವ್ ಗಾಂಧಿ ವಸತಿ ನಿಗಮದವರು ಸಭೆಗೆ ತಿಳಿಸಿದರು.
- ✓ ಉತ್ತರ ಕನ್ನಡ ಭಟ್ಕಳ ತಾಲ್ಲೂಕು, ಬೆಳ್ಕೆ ಜಾಗ ಹಸ್ತಾಂತರವಾಗಿದ್ದು, ದಿ: 31.05.2011ರೊಳಗೆ ಪೂರ್ಣಗೊಳಿಸಿ ಹಸ್ತಾಂತರಿಸುವುದಾಗಿ ಇಂಜಿನಿಯರ್ ಹಾಗೂ ರಾಜೀವ್ ಗಾಂಧಿ ವಸತಿ ನಿಗಮದವರು ಸಭೆಗೆ ತಿಳಿಸಿದರು.
- ✓ ಉತ್ತರ ಕನ್ನಡ ಜಿಲ್ಲೆ ಅಂಕೋಲಾ ತಾಲ್ಲೂಕು, ಆವರ್ಸಾದಲ್ಲಿ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ [ಗಂಡು] ಆವರಣ ಜಾಗ ಗುರುತಿಸಿದ್ದು, 31.05.2011ರೊಳಗೆ ಪೂರ್ಣಗೊಳಿಸಿ ಹಸ್ತಾಂತರಿಸುವುದಾಗಿ ಇಂಜಿನಿಯರ್ ಹಾಗೂ ರಾಜೀವ್ ಗಾಂಧಿ ವಸತಿ ನಿಗಮದವರು ಸಭೆಗೆ ತಿಳಿಸಿದರು.
- ✓ ಹಂತ–1:– ಬಳ್ಳಾರಿ ಜಿಲ್ಲೆ ಸಿರಗುಪ್ಪಾ ತಾಲ್ಲೂಕು, ಸಿರಿಗೇರಿ ಶಿಕ್ಷಕರ ವಸತಿ ಗೃಹ ದಿ: 29.02.2012ರೊಳಗೆ ಪೂರ್ಣಗೊಳಿಸಿ ಹಸ್ತಾಂತರಿಸುವುದಾಗಿ ಇಂಜಿನಿಯರ್ ಹಾಗೂ ರಾಜೀವ್ ಗಾಂಧಿ ನಿಗಮ ನಿಯಮಿತದವರು ಸಭೆಗೆ ತಿಳಿಸಿದರು
- ✓ ಶಿರಗುಪ್ಪಾ ತಾಲ್ಲೂಕಿನ ಹುಚ್ಚೋಳಿಯ ಶಿಕ್ಷಕರ ವಸತಿ ಗೃಹ ಪೂರ್ಣಗೊಂಡಿದ್ದು, ಕೂಡಲೇ ಹಸ್ತಾಂತರಿಸುವುದಾಗಿ ಸಭೆಗೆ ತಿಳಿಸಿದರು.
- ✓ ಸಂಡೂರು ತಾಲ್ಲೂಕು, ತೋರಣ್‌ಗಲ್ ಮತ್ತು ಬಂಡ್ರಿಯ ಶಿಕ್ಷಕರ ವಸತಿ ಗೃಹ 2011ರ ಡಿಸೆಂಬರ್ ಅಂತ್ಯಕ್ಕೆ ಪೂರ್ಣಗೊಳಿಸಿ ಹಸ್ತಾಂತರಿಸುವುದಾಗಿ ಸಭೆಗೆ ತಿಳಿಸಿದರು.
- ✓ ಹಂತ–2:– 2ನೇ ಹಂತದ ಬಳ್ಳಾರಿ ಜಿಲ್ಲೆ ಗುಡಿಕೋಟೆ ಶಿಕ್ಷಕರ ವಸತಿ ಗೃಹ ಪೂರ್ಣಗೊಂಡಿದ್ದು ನವೆಂಬರ್ 30ಕ್ಕೆ ಹಸ್ತಾಂತರಿಸುವುದಾಗಿ ತಿಳಿಸಿದರು.
- ✓ ಸಂಡೂರು ತಾಲ್ಲೂಕು ಬಮ್ಮಿಗಟ್ಟಾ ಮೊದಲ ಅಂತಸ್ತು ಪೂರ್ಣಗೊಂಡಿದ್ದು, ಪೂರ್ಣಗೊಳಿಸಿ 2012ರ ಫೆಬ್ರವರಿಯೊಳಗೆ ಹಸ್ತಾಂತರಿಸುವುದಾಗಿ ಇಂಜಿನಿಯರ್ ಮತ್ತು ರಾಜೀವ್ ಗಾಂಧಿ ವಸತಿ ನಿಗಮದವರು ಸಭೆಗೆ ತಿಳಿಸಿದರು.
- ✓ ಹಂತ–3; ಬಳ್ಳಾರಿ ಜಿಲ್ಲೆ ಹಡಗಲಿ ತಾಲ್ಲೂಕು, ಹಿರೇಹಡಗಲಿ ನಿವೇಶನ ಹಸ್ತಾಂತರವಾಗಿದ್ದು, ಕೂಡಲೇ ಪ್ರಾರಂಭಿಸುವುದಾಗಿ ತಿಳಿಸಿದರು.
- ✓ ಬಳ್ಳಾರಿ ಜಿಲ್ಲೆ ಹೆಚ್.ಬಿ.ಹಳ್ಳಿ ನಿವೇಶನ ಇನ್ನೂ ಹಸ್ತಾಂತರಿಸಿಲ್ಲವೆಂದು ತಿಳಿಸಿದರು. ಕೂಡಲೇ ಉಪನಿರ್ದೇಶಕರು ಈ ಬಗ್ಗೆ ಗಮನಹರಿಸಿ ನಿವೇಶನ ಗುರುತಿಸಿ ಹಸ್ತಾಂತರಿಸಲು ಆಯುಕ್ತರು ತಿಳಿಸಿದರು.
- ✓ ಹಂತ–1:– ಗುಲ್ಬರ್ಗಾ ಜಿಲ್ಲೆ ಆಫಜಲ್‌ಪುರ ಗೊಬ್ಬರು, ಬೈರಮಡಗಿ ಎರಡು ವಸತಿ ಗೃಹಗಳು ಪೂರ್ಣಗೊಂಡಿದ್ದು, ವಿದ್ಯುತ್ ಸಮಸ್ಯೆ ಇದ್ದು, ಜೆಸ್ಕಾಂಗೆ ಸಂಪರ್ಕಿಸಿ ವಿದ್ಯುತ್ ಸಂಪರ್ಕ ಪಡೆದು ಕೂಡಲೇ ಹಸ್ತಾಂತರಿಸಲು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ಮತ್ತು ಇಂಜಿನಿಯರ್ ರವರಿಗೆ ಮಾನ್ಯ ಆಯುಕ್ತರು ಸೂಚಿಸಿದರು.

- ✓ ಅಫಜಲ್‌ಪುರದ ಮಾಶ್ಯಾಳ ಶಿಕ್ಷಕರ ವಸತಿ ಗೃಹ ನೆಲ ಮಹಡಿ ಪೂರ್ಣಗೊಂಡಿದ್ದು, ದಿ: 29.02.2012 ರೊಳಗೆ ಪೂರ್ಣಗೊಳಿಸಿ ಹಸ್ತಾಂತರಿಸುವುದಾಗಿ ಇಂಜಿನಿಯರ್ ಮತ್ತು ರಾಜೀವ್ ಗಾಂಧಿ ವಸತಿ ನಿಗಮದವರು ಸಭೆಗೆ ತಿಳಿಸಿದರು.
- ✓ ಆಳಂದ ತಾಲ್ಲೂಕಿನ ಮದನ ಹಿಪ್ಪರಗಾ ಮತ್ತು ವಿ.ಕೆ.ಸಲಗಾರ ಎರಡು ಶಿಕ್ಷಕರ ವಸತಿ ಗೃಹ 1ನೇ ಮಹಡಿ ಹಂತದಲ್ಲಿದ್ದು, ದಿ: 29.02.2012 ರೊಳಗೆ ಪೂರ್ಣಗೊಳಿಸಿ ಹಸ್ತಾಂತರಿಸುವುದಾಗಿ ಇಂಜಿನಿಯರ್ ಮತ್ತು ರಾಜೀವ್ ಗಾಂಧಿ ವಸತಿ ನಿಗಮದವರು ಸಭೆಗೆ ತಿಳಿಸಿದರು.
- ✓ ಆಳಂದ ತಾಲ್ಲೂಕಿನ ನಿಂಬರ್ಗಾ ವಸತಿ ಗೃಹ ಪೂರ್ಣಗೊಂಡಿದ್ದು, ದಿ: 31.12.2011ರೊಳಗೆ ಹಸ್ತಾಂತರಿಸುವುದಾಗಿ ಇಂಜಿನಿಯರ್ ಮತ್ತು ರಾಜೀವ್ ಗಾಂಧಿ ವಸತಿ ನಿಗಮದವರು ಸಭೆಗೆ ತಿಳಿಸಿದರು.
- ✓ ಸೇಡಂ ತಾಲ್ಲೂಕು ಮಳಕೇಡ ಶಿಕ್ಷಕರ ವಸತಿ ಗೃಹ ಪೂರ್ಣಗೊಂಡಿದ್ದು, ವಿದ್ಯುತ್ ಸಂಪರ್ಕ ಸಮಸ್ಯೆ ಇರುವುದಾಗಿ ಇಂಜಿನಿಯರ್‌ವರು ಸೂಚಿಸಿದರು. ಇದಕ್ಕೆ ಜೆಸ್ಕಾಂ ರವರನ್ನು ಸಂಪರ್ಕಿಸಿ ವಿದ್ಯುತ್ ಸಂಪರ್ಕ ಪಡೆಯಲು ತಿಳಿಸಿದರು.
- ✓ ಸೇಡಂ ತಾಲ್ಲೂಕು ಮದನಾ ಶಿಕ್ಷಕರ ವಸತಿ ಗೃಹದ ನಿವೇಶನ ಸಮಸ್ಯೆಯಿಂದ ಕಾಮಗಾರಿ ಸ್ಥಗಿತಗೊಂಡಿರವುದಾಗಿ ಇಂಜಿನಿಯರ್ ತಿಳಿಸಿದಾಗ ಮಾನ್ಯ ಆಯುಕ್ತರು ಗುಲ್ಬರ್ಗಾ ಜಿಲ್ಲಾಧಿಕಾರಿಗಳನ್ನು ಸಂಪರ್ಕಿಸಿ ಸಮಸ್ಯೆ ಬಗೆಹರಿಸಲು ತಿಳಿಸಿದರು.
- ✓ ಚಿತ್ತಾಪುರ ತಾಲ್ಲೂಕು, ಅಳ್ಳೊಳ್ಳಿ, ನಾಲವಾರ ಮತ್ತು ಶ್ರೀಕ್ಷೇತ್ರ ರೇವಗ್ಗಿ ಮೂರು ಶಿಕ್ಷಕರ ವಸತಿ ಗೃಹಗಳು ಪೂರ್ಣಗೊಂಡಿದ್ದು, ವಿದ್ಯುತ್ ಸಮಸ್ಯೆ ಇದ್ದು, ಜೆಸ್ಕಾಂಗೆ ಈಗಾಗಲೇ ಪತ್ರ ಬರೆದಿದ್ದು ಜೆಸ್ಕಾಂ ರವರನ್ನು ಸಂಪರ್ಕಿಸಿ ಸಮಸ್ಯೆ ಬಗೆಹರಿಸಿ ಕೂಡಲೇ ಇಲಾಖೆಗೆ ಹಸ್ತಾಂತರಿಸಲು ಮಾನ್ಯ ಆಯುಕ್ತರು ಇಂಜಿನಿಯರ್ ಮತ್ತು ರಾಜೀವ್ ಗಾಂಧಿ ವಸತಿ ನಿಗಮದವರಿಗೆ ಸೂಚಿಸಿದರು.
- ✓ ಚಿಂಚೋಳ್ಳಿ ತಾಲ್ಲೂಕು, ಸುಲೇಪೇಟೆ ಶಿಕ್ಷಕರ ವಸತಿ ಗೃಹ ಪೂರ್ಣಗೊಂಡಿದ್ದು, ವಿದ್ಯುತ್ ಸಮಸ್ಯೆ ಇದ್ದು, ಇದನ್ನು ಮೇಲೆ ಸೂಚಿಸಿದಂತೆ ಪರಿಹರಿಸಲು ಆಯುಕ್ತರು ಸೂಚಿಸಿದರು.
- ✓ ಚಿಂಚೊಳ್ಳಿ ತಾಲ್ಲೂಕು, ಚೆಮ್ಮನಚೋಡು ಶಿಕ್ಷಕರ ವಸತಿ ಗೃಹ 1ನೇ ಮಹಡಿ ಪೂರ್ಣಗೊಂಡಿದ್ದು, ಪೂರ್ಣಗೊಳಿಸಿ ದಿ: 29.02.2012ರೊಳಗೆ ವಿದ್ಯುತ್ ಮತ್ತು ನೀರಿನ ಸಂಪರ್ಕದೊಂದಿಗೆ ಇಲಾಖೆಗೆ ಹಸ್ತಾಂತರಿಸವುದಾಗಿ ಇಂಜಿನಿಯರ್ ಮತ್ತು ರಾಜೀವ್ ಗಾಂಧಿ ವಸತಿ ನಿಗಮದವರು ತಿಳಿಸಿದರು.
- ✓ ಜೇವರ್ಗಿ ತಾಲ್ಲೂಕು, ನೆಲೋಗಿ, ಅಂದೋಲ, ಎಡ್ರಾಮಿ ಈ ಮೂರು ಶಿಕ್ಷಕರ ವಸತಿ ಗೃಹಗಳ ಕಾಮಗಾರಿ ಪೂರ್ಣಗೊಂಡಿದ್ದು, ದಿ: 31.12.2011ರೊಳಗೆ ಇಲಾಖೆಗೆ ಹಸ್ತಾಂತರಿಸುವುದಾಗಿ ಇಂಜಿನಿಯರ್ ಮತ್ತು ರಾಜೀವ್ ಗಾಂಧಿ ವಸತಿ ನಿಗಮದವರು ಸಭೆಗೆ ತಿಳಿಸಿದರು.
- ✓ ಶಹಾಪುರ ತಾಲ್ಲೂಕಿನ, ತಳಬಿಡಿ, ಚಟ್ನಹಳ್ಳಿ ಎರಡು ವಸತಿ ಗೃಹಗಳ ಕಾಮಗಾರಿ ಅಂತಿಮ ಹಂತದಲ್ಲಿದ್ದು, ದಿ: 31.12.2011ರೊಳಗೆ ಇಲಾಖೆಗೆ ಹಸ್ತಾಂತರಿಸುವುದಾಗಿ ಇಂಜಿನಿಯರ್ ಮತ್ತು ರಾಜೀವ್ ಗಾಂಧಿ ವಸತಿ ನಿಗಮದವರು ಸಭೆಗೆ ತಿಳಿಸಿದರು.
- ✓ ಯಾದಗಿರಿ ತಾಲ್ಲೂಕು, ಕಡೇಚೂರು, ಕೋಂಕಲ್, ಮಾದವಾರ ಮೂರು ಶಿಕ್ಷಕರ ವಸತಿ ಗೃಹಗಳು ಅಂತಿಮ ಹಂತದಲ್ಲಿದ್ದು, ಇದನ್ನು ಈ ವರ್ಷದ ಅಂತ್ಯದೊಳಗೆ ಇಲಾಖೆಗೆ ಹಸ್ತಾಂತರಿಸಲು ಮಾನ್ಯ ಆಯುಕ್ತರು ಸೂಚಿಸಿದರು.

- ✓ ಸುರುಪುರ ತಾಲ್ಲೂಕು, ಕೆಂಬಾವಿ, ಕಕ್ಕೇರಾ [ವಜ್ಜಲ್], ಹುಣಸಗಿ ಈ ಮೂರು ಶಿಕ್ಷಕರ ವಸತಿ ಗೃಹಗಳು ಅಂತಿಮ ಹಂತದಲ್ಲಿದ್ದು, ಇದನ್ನು ಈ ವರ್ಷದ ಅಂತ್ಯದೊಳಗೆ ಇಲಾಖೆಗೆ ಹಸ್ತಾಂತರಿಸಲು ಮಾನ್ಯ ಆಯುಕ್ತರು ಸೂಚಿಸಿದರು.
- ✓ ಹಂತ–4:– ಗುಲ್ಬರ್ಗಾ ಜಿಲ್ಲೆ, ಗುಲ್ಬರ್ಗಾ ದಕ್ಷಿಣ ತಾಲ್ಲೂಕಿನ, ಸ.ಪ್ರೌ.ಶಾ ಆವರಣ, ಕಣದಾಳ ಶಿಕ್ಷಕರ ವಸತಿ ಗೃಹ ಲಿಂಟಲ್ ಹಂತದಲ್ಲಿದ್ದು, ದಿ: 31.03.2012ರೊಳಗೆ ಪೂರ್ಣಗೊಳಿಸಿ ಇಲಾಖೆಗೆ ಹಸ್ತಾಂತರಿಸುವುದಾಗಿ ಇಂಜಿನಿಯರ್ ಮತ್ತು ರಾಜೀವ್ ಗಾಂಧಿ ವಸತಿ ನಿಗಮದವರು ಸಭೆಗೆ ತಿಳಿಸಿದರು.
- ✓ ಹಂತ–1 ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕು, ಕಾರಟಗಿ, ಕನಕಗಿರಿ ಆನೇಗುಂದಿ ಮೂರು ಶಿಕ್ಷಕರ ವಸತಿ ಗೃಹಗಳು ಪೂರ್ಣಗೊಂಡಿದ್ದು, ದಿ: 30.11.2011ರೊಳಗೆ ಇಲಾಖೆಗೆ ಹಸ್ತಾಂತರಿಸುವುದಾಗಿ ಇಂಜಿನಿಯರ್ ಮತ್ತು ರಾಜೀವ್ ಗಾಂಧಿ ವಸತಿ ನಿಗಮದವರು ಸಭೆಗೆ ತಿಳಿಸಿದರು.
- ✓ ಯಲಬುರ್ಗಾ ತಾಲ್ಲೂಕು ಬೇವೂರು, ಮಂಗಳೂರು ಮತ್ತು ತಳಕಲ್ ಶಿಕ್ಷಕರ ವಸತಿ ಗೃಹಗಳು ಪೂರ್ಣಗೊಂಡಿದ್ದು, ಮಂಗಳೂರಿನ ಶಿಕ್ಷಕರ ವಸತಿ ಗೃಹ ಇಲಾಖೆಗೆ ಹಸ್ತಾಂತರಿಸಲಾಗಿದ್ದು, ಶಿಕ್ಷಕರಿಗೆ ಹಂಚಿಕೆ ಮಾಡಿರುವುದಾಗಿ ಉಪನಿರ್ದೇಶಕರು ಸಭೆಗೆ ತಿಳಿಸಿದರು. ಉಳಿದವುಗಳನ್ನು ಡಿಸೆಂಬರ್ ಅಂತ್ಯದೊಳಗೆ ಪಡೆದು ಶಿಕ್ಷಕರಿಗೆ ಹಸ್ತಾಂತರಿಸುವುದಾಗಿ ಉಪನಿರ್ದೇಶಕರು ಸಭೆಗೆ ತಿಳಿಸಿದರು.
- ✓ ಕುಷ್ಠಗಿ ತಾಲ್ಲೂಕಿನ ದೋತಿಹಾಳ, ಹನುಮಾಸಾಗರ, ತಾವರಗೇರಾ ಮೂರು ಶಿಕ್ಷಕರ ವಸತಿ ಗೃಹ ಪೂರ್ಣಗೊಂಡಿದ್ದು, ಹನುಮಾ ಸಾಗರ ಇಲಾಖೆಗೆ ಹಸ್ತಾಂತರವಾಗಿದ್ದು, ಡಿಸೆಂಬರ್ ಅಂತ್ಯದೊಳಗೆ ಶಿಕ್ಷಕರಿಗೆ ಹಂಚುವುದಾಗಿ ಉಪನಿರ್ದೇಶಕರು ಸಭೆಗೆ ತಿಳಿಸಿದರು.
- ✓ ಹಂತ–2: ಕೊಪ್ಪಳ ತಾಲ್ಲೂಕಿನ ಯಲ್ಬುರ್ಗಾ ತಾಲ್ಲೂಕಿನ ಇಟಗಿ ಶಿಕ್ಷಕರ ವಸತಿ ಗೃಹ ಪೂರ್ಣಗೊಂಡಿದ್ದು, ದಿ: 30.11.2011ರೊಳಗೆ ಹಸ್ತಾಂತರಿಸುವುದಾಗಿ ಇಂಜಿನಿಯರ್ ಮತ್ತು ರಾಜೀವ್ ಗಾಂಧಿ ವಸತಿ ನಿಗಮದವರು ಸಭೆಗೆ ತಿಳಿಸಿದರು.
- ✓ ಹಂತ–3:– ಕೊಪ್ಪಳ ತಾಲ್ಲೂಕು ಬೆಟ್ಟಗೇರಿ ಶಿಕ್ಷಕರ ವಸತಿ ಗೃಹ ಲಿಂಟಲ್ ಹಂತದಲ್ಲಿದ್ದು, ದಿ: 31.05.2012 ರೊಳಗೆ ಕಾಮಗಾರಿ ಪೂರ್ಣಗೊಳಿಸುವುದಾಗಿ ಇಂಜಿನಿಯರ್ ಮತ್ತು ರಾಜೀವ್ ಗಾಂಧಿ ವಸತಿ ನಿಗಮದವರು ಸಭೆಗೆ ತಿಳಿಸಿದರು.
- ✓ ಹಂತ–1:– ರಾಯಚೂರು ಜಿಲ್ಲೆ ಲಿಂಗಸಗೂರು ತಾಲ್ಲೂಕಿನ ನಾಗರಹಾಳ ಶಿಕ್ಷಕರ ವಸತಿ ಗೃಹ 1ನೇ ಮಹಡಿ ಅಂತಿಮ ಹಂತದಲ್ಲಿದ್ದು, ದಿ: 31.03.2012ರೊಳಗೆ ಮತ್ತು ಹಟ್ಟಿ ಗ್ರಾಮ ಶಿಕ್ಷಕರ ವಸತಿ ಗೃಹ ಪೂರ್ಣಗೊಂಡಿದ್ದು ದಿ: 31.12.2011ರೊಳಗೆ ಮತ್ತು ಬೆ.ಮುದಗಲ್ ಲಿಂಟಲ್ ಹಂತದಲ್ಲಿದ್ದು ದಿ: 31.05.2012 ರೊಳಗೆ ಕಾಮಗಾರಿ ಪೂರ್ಣಗೊಳಿಸುವುದಾಗಿ ಇಂಜಿನಿಯರ್ ಮತ್ತು ರಾಜೀವ್ ಗಾಂಧಿ ವಸತಿ ನಿಗಮದವರು ಸಭೆಗೆ ತಿಳಿಸಿದರು.
- ✓ ಸಿಂಧನೂರು ತಾಲ್ಲೂಕು, ಜವಳಗೇರಾ ಮತ್ತು ಹಡಗಿನಾಳ ಅಂತಿಮ ಹತದಲ್ಲಿದ್ದು, ದಿ: 3112.2011ರೊಳಗೆ ಕಾಮಗಾರಿ ಪೂರ್ಣಗೊಳಿಸಿ ಇಲಾಖೆಗೆ ಹಸ್ತಾಂತರಿಸುವುದಾಗಿ ಇಂಜಿನಿಯರ್ ಮತ್ತು ರಾಜೀವ್ ಗಾಂಧಿ ವಸತಿ ನಿಗಮದವರು ಸಭೆಗೆ ತಿಳಿಸಿದರು.
- ✓ ದೇವದುರ್ಗ ತಾಲ್ಲೂಕು ಚಿಂಚೋಡಿ, ಅರಕೇರಾ, ಮಸರಕಲ್, ಮಾನ್ವಿ ತಾಲ್ಲೂಕು, ಪೋತ್ನಾಳ, ಕುರುಡಿ, ಕವಿತಾಳ ಏಳು ಶಿಕ್ಷಕರ ವಸತಿ ಗೃಹಗಳು ಅಂತಿಮ ಹಂತದಲ್ಲಿದ್ದು, ದಿ:

31.12.2011ರೊಳಗೆ ಕಾಮಗಾರಿ ಪೂರ್ಣಗೊಳಿಸಿ ಇಲಾಖೆಗೆ ಹಸ್ತಾಂತರಿಸುವುದಾಗಿ ಇಂಜಿನಿಯರ್ ಮತ್ತು ರಾಜೀವ್ ಗಾಂಧಿ ವಸತಿ ನಿಗಮದವರು ಸಭೆಗೆ ತಿಳಿಸಿದರು.

- ✓ ಹಂತ–1 ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕು, ಭಾತಂಬ್ರಾ, ಧನುರ, ಹುಮ್ನಾಬಾದ್ ತಾಲ್ಲೂಕು, ನಿರ್ಣಾ, ಬಸವಕಲ್ಯಾಣ ತಾಲ್ಲೂಕು, ಮುಡಬಿ, ಮಂಟಾಳ್ ಮತ್ತು ಔರಾದ್ ಆರು ಶಿಕ್ಷಕರ ವಸತಿ ಗೃಹಗಳನ್ನು ಕ್ಯಾಶೂಟೆಕ್ ರವರು ಕಾಮಗಾರಿ ನಿರ್ವಹಿಸುತ್ತಿದ್ದು, ಸದರಿ ಇಂಜಿನಿಯರ್ ಮತ್ತು ರಾಜೀವ್ ಗಾಂಧಿ ವಸತಿ ನಿಗಮದವು ದಿ: 31.12.2011ರೊಳಗೆ ಆರು ಶಿಕ್ಷಕರ ವಸತಿ ಗೃಹಗಳನ್ನು ಇಲಾಖೆಗೆ ಹಸ್ತಾಂತರಿಸುವುದಾಗಿ ಸಭೆಗೆ ತಿಳಿಸಿದರು.

**ಶಾಲೆಯಿಂದ ಹೊರಗುಳಿದ ಮಕ್ಕಳು ಶಾಲಾ ಮುಖ್ಯವಾಹಿನಿಗೆ ಕರೆತರಲು ಕೈಗೊಂಡಿರುವ ಕ್ರಮಗಳು:**

ಎಲ್ಲ ಜಿಲ್ಲೆಗಳ ಉಪನಿರ್ದೇಶಕರು ಶಾಲೆಯಿಂದ ಹೊರಗುಳಿದ ಮಕ್ಕಳನ್ನು ದಾಖಲಿಸಿಕೊಂಡ ಸಂಖ್ಯೆಯ ಮಾಹಿತಿಯು ಸರಿಯಾಗಿಲ್ಲ ಎಂದು ಆಯುಕ್ತರು,ಬೆಂಗಳೂರು ಇವರು ತಿಳಿಸುತ್ತಾ, ಭಾರತ ಸರ್ಕಾರದಿಂದ ಮಾಡಿದ ಸರ್ವೆಗೂ ವಿಭಾಗವಾರು ನೀಡಲಾದ ಮಾಹಿತಿಗೂ ವ್ಯತ್ಯಾಸವಿದೆ. ಎಲ್ಲ ಅಧಿಕಾರಿಗಳು ಗ್ರಾಮಾಂತರ ಪ್ರದೇಶಗಳು ಹಾಗೂ ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಮಕ್ಕಳನ್ನು ಗುರ್ತಿಸಿ ಮುಖ್ಯವಾಹಿನಿಗೆ ತರುವುದು. ಯಾವುದೇ ಮಗು ಶಾಲೆಯಿಂದ ಹೊರಗುಳಿಯದಂತೆ ನೋಡಿಕೊಳ್ಳಲು ಎಲ್ಲ ಅಧಿಕಾರಿಗಳು ಕ್ರಿಯಾ ಯೋಜನೆ ರೂಪಿಸಿಕೊಂಡು, ಕಾರ್ಯರೂಪಕ್ಕೆ ತರಲು ಸೂಚಿಸಿದರು.

**ಮಕ್ಕಳ ಜಾಡು ಹಿಡಿಯುವಿಕೆ:** ಚೈಲ್ಡ್ ಟ್ರ್ಯಾಕಿಂಗ್ ತಂತ್ರಾಂಶವನ್ನು ಬಳಸಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ತರಲು ತಿಳಿಸಿದಾಗ್ಯೂ, ಡಿ.ವೈ.ಪಿ.ಸಿ. ಬಿಜಾಪೂರ ಇವರನ್ನು ಹೊರತುಪಡಿಸಿ ಯಾವ ಜಿಲ್ಲೆಯವರೂ ಈ ತಂತ್ರಾಂಶವನ್ನು ಇನ್ನುವರೆಗೆ ಬಳಸಿಲ್ಲ ಏಕೆ ಎಂದು ಪ್ರಶ್ನಿಸಲಾಗಿ, ಈ ಬಗ್ಗೆ ಕೆಲವು ಹ್ಯಾಂಡ್‌ಸೆಟ್ ಹಾಗೂ ಅಂತರ್ಜಾಲದ ತೊಂದರೆ ಎಂದು ಅಧಿಕಾರಿಗಳು ತಿಳಿಸಿದಾಗ ಈ ಬಗ್ಗೆ ಯಾವುದೇ ಸಬೂಬು ಹೇಳದೆ ಪ್ರತಿ ತಿಂಗಳು ಕ್ಷೇತ್ರ ಶಿಕ್ಷಣಾಧಿಕಾರಿಗಳ, ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಸದಸ್ಯರ ಸಭೆ ನಡೆಸಿ, ಒಂದೇ ಒಂದು ಮಗುವು ಕೂಡಾ ಶಾಲೆಯಿಂದ ಹೊರಗುಳಿಯದಂತೆ ನೋಡಿಕೊಳ್ಳಲು ಸೂಚಿಸಲಾಯಿತು.

**ಅಗ್ನಿ ನಂದಕ** : ಕೆಲವು ಜಿಲ್ಲೆಗಳ ಶಾಲೆಗಳಲ್ಲಿ ಅಗ್ನಿ ನಂದಕಗಳನ್ನು ಇನ್ನೂ ಖರೀದಿಸಿರುವುದಿಲ್ಲ. ಈ ಬಗ್ಗೆ ಡಿಸೆಂಬರ್ ಅಂತ್ಯದೊಳಗೆ ಖರೀದಿಸಿ ಬಳಸುವಂತೆ ತಿಳಿಸಲಾಯಿತು.

**ಹದಿಹರೆಯದ ಹೆಣ್ಣುಮಕ್ಕಳ ಜಾಗೃತಿ ಶಿಬಿರ:–** ಈ ಕುರಿತು ಎಲ್ಲ ಜಿಲ್ಲಾ ಡಯಟ್ ಪ್ರಾಚಾರ್ಯರುಗಳು ಕಿಶೋರಿ ತರಬೇತಿ ಕೈಪಿಡಿಯನ್ನಾಧರಿಸಿ ಪ್ರತಿ ಹಿರಿಯ ಪ್ರಾಥಮಿಕ ಶಾಲೆಗಳ ಹೆಣ್ಣುಮಕ್ಕಳಿಗೆ ತರಬೇತಿ ನಡೆಸಲಾಗುತ್ತಿದೆ ಎಂದು ವಿವರಿಸಿದಾಗ ನವಂಬರ್ ತಿಂಗಳ ಅಂತ್ಯದೊಳಗೆ ಎಲ್ಲ ಜಿಲ್ಲೆಯಿಂದ ತರಬೇತಿ ನೀಡುವ ಕಾರ್ಯಕ್ರಮ ಪೂರ್ಣಗೊಳಿಸುವಂತೆ ತಿಳಿಸಲಾಯಿತು.

**ಸಿಎಎಲ್‌ಸಿ ನಿರ್ವಹಣಾ ಅನುದಾನ:** ಪ್ರತಿ ಕ್ಲಸ್ಟರ್‌ನಲ್ಲಿನ ಒಂದು ಶಾಲೆಗೆ ನೀಡಲಾದ ಸಿ.ಎ.ಎಲ್.ಸಿ. ಕಂಪ್ಯೂಟರ್ ನಿರ್ವಹಣಾ ಅನುದಾನವನ್ನು ಸಂಬಂಧಿಸಿದ ಶಾಲೆಗೆ ಉಪನಿರ್ದೇಶಕರಿಂದ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗೆ ಬಿಡುಗಡೆ ಮಾಡುವುದು. ಸದರಿ ಅನುದಾನವನ್ನು ಈಗಾಗಲೇ ಎಸ್.ಡಿ.ಎಂ.ಸಿ.ಗೆ ಬಿಡುಗಡೆ ಮಾಡದವರು ಕೂಡಲೇ ಸಂಬಂಧಿಸಿದ ಎಸ್.ಡಿ.ಎಂ.ಸಿ.ಯವರಿಗೆ ಬಿಡುಗಡೆಗೊಳಿಸುವಂತೆ ತಿಳಿಸಲಾಯಿತು. ಈ ಬಗ್ಗೆ ಒಂದು ನಿರ್ದೇಶನವನ್ನು ಎಲ್ಲ ಆಯುಕ್ತರು ಕಛೇರಿಯಿಂದ ಉಪನಿರ್ದೇಶಕರಿಗೆ ನೀಡುವಂತೆ ತಿಳಿಸಲಾಯಿತು. ಹಾಗೂ ಬಿ.ಆರ್.ಸಿ. ಮತ್ತು ಬಿ.ಇ.ಓ.

ಕಛೇರಿಗಳಿಗೆ ಹೊಸದಾಗಿ ನೀಡಬೇಕೆಂದಿರುವ ಕಂಪ್ಯೂಟರ್‌ಗಳ ಬಗ್ಗೆ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಡಿಸೆಂಬರ್ ಅಂತ್ಯದೊಳಗೆ ಸರಬರಾಜು ಮಾಡಲಾಗುವುದೆಂದು ಆಯುಕ್ತರು, ಬೆಂಗಳೂರು ಇವರು ತಿಳಿಸಿದರು.

**ಅರ್‌ಇಎಂಎಸ್ ಚಟುವಟಿಕೆಗಳು:** ಈ ಕುರಿತು ಬಳ್ಳಾರಿ, ಬೀದರ್, ಗುಲ್ಬರ್ಗ, ರಾಯಚೂರು ಜಿಲ್ಲೆಯವರು ಮಾಹಿತಿ ನೀಡಿರುವುದಿಲ್ಲ. ಕೂಡಲೇ ಮಾಹಿತಿ ನೀಡುವಂತೆ ತಿಳಿಸಲಾಯಿತು.

**ಜಿಲ್ಲಾದರ್ಶನ:–** ಈ ಕುರಿತು ಎಲ್ಲ ಜಿಲ್ಲೆಗಳಲ್ಲಿ 7ನೇ ತರಗತಿಯ ವಿದ್ಯಾರ್ಥಿಗಳ ಪ್ರವಾಸ ಕಾರ್ಯಕ್ರಮ ಪ್ರಗತಿಯಲ್ಲಿದ್ದು, ಡಿಸೆಂಬರ್15 ರೊಳಗೆ ಪೂರ್ಣಗೊಳಿಸಲು ತಿಳಿಸಲಾಯಿತು.

**ಸಮನ್ವಯ ಶಿಕ್ಷಣ**: ವಿಶೇಷ ಅಗತ್ಯತೆ ಇರುವ ಶಾಲಾ ಮಕ್ಕಳಿಗೆ ನೀಡಬೇಕಾದ ಸಾಧನೆ, ಸಲಕರಣೆ ವಿತರಣೆ ಮಾಡದಿದ್ದವರು ಡಿಸೆಂಬರ್ ಅಂತ್ಯದೊಳಗೆ ವಿತರಣೆ ಮಾಡುವಂತೆ ತಿಳಿಸಲಾಯಿತು.

